₹ 5/-

# ನೇಸರು


## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** **Vol XXXIII - 5** **May 2015**

PAGES 12




ಬೆಂಗಳೂರಿನ ಲಾಲ್‌ಬಾಗ್‌ನ ಒಂದು ನೋಟ


**The Mysore Association, Bombay**

393, Bhau Daji Road, Matunga, Mumbai - 400 019.

Tel.: 2402 4647, 2403 7065 • Fax : 2401 0574

Email : mysoreassociation.mumbai@gmail.com

# ಕನ್ನಡ ರಂಗಭೂಮಿಯಲ್ಲಿ ಸಾಮಾಜಿಕ ಕ್ರಾಂತಿ
# ರಂಗಭೂಮಿಯಲ್ಲಿ ಕ್ರಾಂತಿಕಾರಿ ಸಂಘಟನೆ

ಬಹುಕಾಲದಿಂದ ಸಮಾಜ ಅಪರಾಧ-ಶಿಕ್ಷೆ ಎರಡನ್ನೇ ಒಪ್ಪಿಕೊಂಡು ಬಂದಿದೆ. ಕಾರಣಾಂತರಗಳಿಂದ ಹಲವಾರು ಹಳ್ಳಿಗರು ಕಾರಾವಾಸ ಸೇರುತ್ತಾರೆ. ಅವರ ಅಪರಾಧ ಆಕಸ್ಮಿಕ ಇರಬಹುದು ಇಲ್ಲವೇ ಉದ್ದೇಶ



ಪೂರ್ವಕವಾಗಿರಬಹುದು. ಏನಾದರೂ ಕೂಡ ಅವರುಗಳು ಕಾರಾಗೃಹ ಸೇರಿದರೆಂದು ಸಮಾಜ ಅವರ ಮೇಲೆ 'ಅನರ್ಹ' ಎಂಬ ಮುದ್ರೆಯನ್ನು ಒತ್ತಿಬಿಡುತ್ತದೆ. ಮನೆಯವರೂ ಕೂಡ ಅವರನ್ನು ತ್ಯಜಿಸಿ ಬಿಡುತ್ತಾರೆ. ಮತ್ತೆ ಅವರಿಗೆ ಸಮಾಜದ ತೆಕ್ಕೆಯನ್ನು ಸೇರುವ ಅವಕಾಶವೇ ಸಿಗುವುದಿಲ್ಲ. ಹೀಗಾಗಿ ಅವರುಗಳೆಲ್ಲರ ಮನಸ್ಸಿನ ಮೇಲೆ ಒಂದು ಆಘಾತವಾಗುತ್ತದೆ. ಇವುಗಳನ್ನು ಮೀರಿ ಈ ದುರ್ದೈವಿಗಳನ್ನು ಮತ್ತೆ ಸಮಾಜದೊಳಗೆ ಸೇರಿಸಿಕೊಳ್ಳುವ ಒಂದು ಪ್ರಯತ್ನ ಈಗ ಕರ್ನಾಟಕದಲ್ಲಿ ನಡೆದಿದೆ.

ರಂಗಭೂಮಿ ಕಾಲಕಾಲದಲ್ಲಿ ಅನೇಕ ರೂಪಗಳನ್ನು ತೋರಿದೆ. ಕನ್ನಡ ರಂಗಭೂಮಿಯಂತೂ ಪುರಾತನ ಕಾಲದಿಂದ ಈ ಕ್ರಾಂತಿಗಳನ್ನು ತೋರುತ್ತಾ ಮೈದೋರಿದೆ. ಕೇವಲ ಮನರಂಜನೆಯಲ್ಲ, ಕೇವಲ ನೋಡುಗರನ್ನಲ್ಲ, ನಟರು ನಿರ್ದೇಶಕರುಗಳನ್ನೇ ಪರಿವರ್ತಿಸುವ ಒಂದು ಪ್ರಭಾವಶಕ್ತಿ ರಂಗಭೂಮಿಗಿದೆ ಎನ್ನುವುದನ್ನು ಕನ್ನಡ ರಂಗಭೂಮಿ ಇದೀಗ ಮತ್ತೆ ತೋರುತ್ತಿದೆ.


ಸಂಕಲ್ಪ ಕಲಾಸಂಘ, ಮೈಸೂರು ಇದರ ನಿರ್ದೇಶಕರಾದ ಶ್ರೀ ಹುಲುಗಪ್ಪ ಕಟ್ಟೀಮನಿಯವರು ಕನ್ನಡ ರಂಗಭೂಮಿಯಲ್ಲಿ ಅನೇಕ ಕಾಲದಿಂದ ದುಡಿಯುತ್ತಿದ್ದಾರೆ. ಶ್ರೀ ಕೆ. ವಿ. ಸುಬ್ಬಣ್ಣನವರ ಒಡನಾಟದಿಂದ ಹೆಗ್ಗೋಡಿನಲ್ಲಿ ಪಕ್ವವಾದ ಇವರ ರಂಗಕ್ರಿಯೆ ಬೆಂಗಳೂರು, ಮೈಸೂರು ಮತ್ತು ಉತ್ತರ ಕರ್ನಾಟಕದಲ್ಲಿ ಪ್ರದರ್ಶಿತವಾಗಿದೆ.



ರಂಗಭೂಮಿ ಬದುಕಿನ ಒಂದು ಕನ್ನಡಿಯಾಗಬೇಕಾದರೆ, ಬದುಕಿನ ಬಗೆಯನ್ನೇ ಅಭ್ಯಸಿಸಬೇಕೆಂಬುದು ಕಟ್ಟೀಮನಿಯವರ ವಾದ. ಅಂತೆಯೇ, ಆಡುವ ನಾಟಕಕ್ಕಿಂತ ಆಡುತ್ತಿರುವವರ ಬದುಕಿನ ನಾಟಕಗಳನ್ನು ತಿಳಿಯುವುದು



ಅತಿ ಅಗತ್ಯ. ಒಬ್ಬೊಬ್ಬ ನಟನ ಬದುಕಿನ ಹಿಂದೆ ಒಂದು ಮಹಾನಾಟಕವಿರಬಹುದು. ಹೀಗಾಗಿ ಶ್ರೀ ಗೋಪಾಲ್ ಹೊಸೂರು ಅವರ ಸಲಹೆಯಂತೆ ಬಳ್ಳಾರಿಯ ಮಹಾಜೈಲಿಗೆ ಮೊಟ್ಟ ಮೊದಲು ಒಳಹೊಕ್ಕಾಗ, ಕಟ್ಟೀಮನಿಯವರ ಮೇಲೆ ಅತೀವ ಪರಿಣಾಮವಾಯಿತು. ಅಲ್ಲಿದ್ದ ಎಳೆಯರು,



ಹಿರಿಯರು, ಮಧ್ಯವಯಸ್ಕರು ಎಲ್ಲರ ಬದುಕು ಒಂದು ನಾಟಕದವಸ್ತುವಾಗಿದ್ದವು. ಆದರೆ ಕಟ್ಟೀಮನಿಯವರು ಈ ಎಲ್ಲಾ ಖೈದಿಗಳ ಸಾಮಾಜಿಕ ಪುನರ್‌ಸಂಪರ್ಕಕ್ಕೆ ಸೊಂಟ ಕಟ್ಟಿ ನಿಂತರು. ರಂಗಕ್ರಿಯೆಯ ಮೂಲಕ ಈ ದುರ್ದೈವಿಗಳ ಮನಸ್ಸನ್ನು ಮತ್ತೆ ಸಮಾಜದತ್ತ ತಿರುಗಿಸುವ ಕಾರ್ಯವನ್ನು ಕೈಗೊಂಡರು.

ಇದರಂತೆ ಕಟ್ಟೀಮನಿಯವರು ಕಳೆದ ೧೯ ವರ್ಷಗಳಿಂದ ಮೈಸೂರು, ಬೆಂಗಳೂರು ಮತ್ತು ಬೆಳಗಾವಿಯ ಕಾರಾಗೃಹಗಳಲ್ಲಿ ನಾಟಕಗಳನ್ನು ಅಲ್ಲಿಯ ಬಂದಿಗಳಿಂದಲೇ ಆಡಿಸಿದ್ದಾರೆ. ಈ ರಂಗ ಕ್ರಿಯೆಯ ಪ್ರಭಾವದಿಂದ ಅನೇಕ ಬಂದಿಗಳು ಪರಿವರ್ತನೆಯಾಗಿ ಪೆರೋಲ್ ಮೇಲೆ ಹೊರಬಂದು ಸಮಾಜಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಕರ್ನಾಟಕದ ಈ ಪ್ರಯತ್ನದಲ್ಲಿ ಕರ್ನಾಟಕದ ಜೈಲಿನ ವರಿಷ್ಠ ಅಧಿಕಾರಿಗಳ ಸಹಕಾರ ಅತಿ ಮಹತ್ವದ್ದಿದೆ. ಆಗ ಬಳ್ಳಾರಿ ಜಿಲ್ಲೆಯ, ಜಿಲ್ಲಾ ಪೋಲಿಸ್ ಕಮಿಷನರ್ ಆಗಿದ್ದ ಶ್ರೀ ಗೋಪಾಲ್ ಹೊಸೂರು ಅವರೇ ಕಟ್ಟಿಮನಿಯವರಿಗೆ ಪ್ರೇರಣೆಯನ್ನು

*(ಪುಟ 7ಕ್ಕೆ)*

ಗೌ. ಸಂಪಾದಕರು :

ಡಾ. ಜ್ಯೋತಿ ಸತೀಶ್

❖ ❖❖

ಸಂಪಾದಕ ಮಂಡಳಿ:

ಡಾ. ಮಂಜುನಾಥ್

ಕೆ. ಮಂಜುನಾಥಯ್ಯ

ನಾರಾಯಣ ನವಿಲೇಕರ್

ಗಣಪತಿ ಶಂಕರಲಿಂಗ

ನೀಲಕಂಠ ಮೇಡರ್

❖ ❖❖

ಬೆಂಗಳೂರು ಪ್ರತಿನಿಧಿ :

ಎಂ.ಎ.ಎಸ್. ಪ್ರಸಾದ್

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. - ಸಂ

The views expressed by the contributors in this journal are theirs and not of the Association and the Association is not in anyway responsible for the same.

- Ed.

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574

Email :
mysoreassociation.mumbai@gmail.com

Website :
www.mysoreassociation.in

ಸಂಪಾದಕೀಯ

# ನೇಸರು

## ತಿಂಗಳೋಲೆ

ಸಂಪುಟ 32 ಮೇ 2015 ಸಂಚಿಕೆ 5

# ತಾಯಿಯೇ ಪ್ರತ್ಯಕ್ಷ ದೈವ

ಯಾಕೋ ಏನೋ ಇವತ್ತಿನ ದಿನಗಳಲ್ಲಿ ಎಲ್ಲ ಆಚರಣೆಗಳು ಕೇವಲ ಪ್ರದರ್ಶನಕ್ಕೆ ಇಟ್ಟ ಹಾಗೆ ಅನಿಸುತ್ತದೆ. ಅದು ಮದರ್ಸ್ ಡೇ ಇರಬಹುದು, ಫಾದರ್ಸ್ ಡೇ ಇರಬಹುದು. ಆ ದಿನದಂದು ಎಲ್ಲರ ಮನಸ್ಸಿನಲ್ಲಿ ತಂದೆ ತಾಯಿಯನ್ನು ಗೌರವಿಸಬೇಕು ಅನ್ನೋದನ್ನು ಬಲವಂತವಾಗಿ ಹೇರುವಂತೆ ಕಂಡು ಬರುತ್ತದೆ. ಅಲ್ಲಿ ಯಾವುದೇ ಭಾವನೆಗಳನ್ನು ನಾವು ಕಾಣುವುದಿಲ್ಲ. 'ಅಮ್ಮ' ಅನ್ನೋ ಪದದಲ್ಲಿ ಅದೇನೋ ಸೆಳೆತವಿದೆ. ಆ ಎರಡು ಅಕ್ಷರವನ್ನು ಉಚ್ಚರಿಸುವುದರಲ್ಲಿ ಇಡೀ ಬ್ರಹ್ಮಾಂಡದಲ್ಲಿ ಅಡಗಿರುವ ಖುಷಿಯ ಅನುಭವ ನಮಗಾಗುತ್ತದೆ. ಅಮ್ಮ' ನ ವ್ಯಾಖ್ಯಾನಕ್ಕೆ ಪದಗಳೆ ಸಾಕಾಗುತ್ತಿಲ್ಲ. ನಿಜ ಹೇಳಬೇಕೆಂದರೆ ನನಗೆ ಬುದ್ದಿ ಬರುವ ತನಕ ತಂದೆ ತಾಯಿಗಳ ದಿನವೊಂದು ಇದೆ. ಆ ದಿನ ಅವರನ್ನು ಗೌರವಿಸಬೇಕು ಅನ್ನೋದು ತಿಳಿದಿರಲಿಲ್ಲ. ಕ್ರಮೇಣ ಈ ನಗರ ಜೀವನಕ್ಕೆ ಬದುಕು ಹೊಂದಿಕೊಂಡ ಮೇಲೇನೆ ಇದೆಲ್ಲರದ ಅನುಭವವಾಗಿದ್ದು. ನಮಗೆ ವರ್ಷದ ಎಲ್ಲ ದಿನ ಮದರ್ಸ್ ಡೇ, ಫಾದರ್ಸ್ ಡೇ. ಪ್ರತಿದಿನ ನಾವು ನಮ್ಮ ತಂದೆ ತಾಯಿಯಂದಿರನ್ನು ಗೌರವಿಸುತ್ತೇವೆ. ಪ್ರತಿದಿನ ಶಾಲೆಗೆ ಹೋಗುವಾಗ ತಂದೆ ತಾಯಿಯರ ಆಶ್ರೀರ್ವಾದ ಪಡೆದೇ ಮನೆಯಿಂದ ಹೊರಹೋಗುವ ಪದ್ಧತಿ ಇದೆ ಎಷ್ಟೋ ಕಡೆ. ಇವತ್ತಿನ ಮಕ್ಕಳ ಕೈ ತಂದೆ ತಾಯಂದಿರ ಪಾದದವರೆಗೆ ಕೈ ಹೋಗುವುದು ದೂರದ ವಿಷಯ. ಅವರ ಮಂಡಿಯನ್ನು ಮುಟ್ಟಿದರೆ ಅದೆ ಆಶೀರ್ವಾದ.

ಸಾಮಾನ್ಯವಾಗಿ ತಾಯಿಯನ್ನು ಹಲವು ರೂಪದಲ್ಲಿ ಕಾಣುತ್ತೇವೆ. ನಮ್ಮ ಅನೇಕ ದೇವತೆಗಳನ್ನು ನಮ್ಮ ತಾಯಿಯಲ್ಲಿ ಕಾಣುತ್ತೇವೆ. ತಾಯಿಯನ್ನು ಭೂ ತಾಯಿಗೆ ಹೋಲಿಸುತ್ತಾರೆ. ಒಮ್ಮೆ ಒಬ್ಬ ರೈತ ತನ್ನ ಹೊಲದಲ್ಲಿ ಬಹುಕಾಲದಿಂದ ಬಿತ್ತನೆ ಮಾಡುತ್ತಾ ಬಂದಿದ್ದ ಬೀಜವನ್ನು ಬಿತ್ತದೇ ಹೊಸ ತಳಿಯನ್ನು ಪ್ರಯೋಗ ಮಾಡುವ ಮನಸ್ಸು ಮಾಡಿದ. ಅದಕ್ಕೆ ತಕ್ಕನಾಗಿ ತನ್ನ ಹೊಲವನ್ನು ಸಜ್ಜುಗೊಳಿಸಿದ. ಆಗ ಅವನ ಪಕ್ಕದ ಹೊಲದ ರೈತ ಅವನನ್ನು ಬಂದು ತಡೆಯುತ್ತಾನೆ. ಹೊಸ ತಳಿಯನ್ನು ಪ್ರಯೋಗ ಮಾಡುವುದರಿಂದ ನಿನಗೆ ನಷ್ಟವೇ ಹೊರತು ಲಾಭವಾಗುವುದಿಲ್ಲ. ನಿನ್ನ ಹೊಲ ಹಳೆ ಬೀಜಕ್ಕೆ ಒಗ್ಗಿಕೊಂಡಿದೆ. ಹೊಸ ತಳಿಯನ್ನು ಪ್ರಯೋಗ ಮಾಡಬೇಡ ಎಂದು ತಡೆಯುತ್ತಾನೆ. ಆದರೆ ಈ ರೈತನು ಅವನಿಗೆ ತಿಳಿಹೇಳುತ್ತಾನೆ. ಈ ಭೂಮಿ ತಾಯಿ ಇವತ್ತಿನವರೆಗೆ ತನ್ನನ್ನು ನಂಬಿದವರನ್ನು ಕೈಬಿಡಲಿಲ್ಲ. ಈ ಭೂತಾಯಿ ನಮ್ಮ ಹೆತ್ತ ತಾಯಿ ಇದ್ದ ಹಾಗೆ. ಮಕ್ಕಳು ಎಷ್ಟು ನೋವು ಕೊಟ್ಟರೂ ಅದನ್ನೆಲ್ಲ ತನ್ನ ಒಡಲಿಗೆ ಹಾಕಿಕೊಂಡು ನಗುನಗುತ್ತಾ ಇರುವವಳು. ಎಂತಹ ನೋವಿಗೂ ಅವಳಿಂದ ಸಿಗುವುದು ಪ್ರೀತಿಯೇ ಹೊರತು ಕೋಪವಲ್ಲ. ಹಾಗೆಯೇ ನನ್ನ ಈ ಹೊಸ ತಳಿಯ ಪ್ರಯೋಗಕ್ಕೆ ಭೂತಾಯಿ ಸಂಪೂರ್ಣ ಸಹಕಾರವನ್ನು ನೀಡುತ್ತಾಳೆ ಅನ್ನೋ ಭರವಸೆ ನನಗಿದೆ ಎನ್ನುತಾನೆ. ಅಂತೆಯೇ ಹೊಸ ತಳಿಯ ಪ್ರಯೋಗದಿಂದಾಗಿ ಹಿಂದಿನ ಬೆಳೆಗಿಂತಲೂ ದುಪ್ಪಟ್ಟು ಬೆಳೆಯನ್ನು ತೆಗೆಯುತ್ತಾನೆ. ಹೊಸ ತಳಿಯ ಬಗ್ಗೆ ಅವನಿಗಿದ್ದ ದೃಡ ನಿಶ್ಚಯ, ಭೂತಾಯಿಯ ಮೇಲೆ ಅವನಿಗಿದ್ದ ಭರವಸೆ ಫಲಕೊಟ್ಟಿತು. ಇದನ್ನು ನೋಡಿದ ಪಕ್ಕದ ಹೊಲದ ರೈತ ನಂಜುಕಾರಿ ತಾನೂ ಕೂಡ ಹೊಸ ತಳಿಯನ್ನು ಪ್ರಯೋಗ ಮಾಡಿ ಅವನಿಗಿಂತ ಹೆಚ್ಚಿನ ಫಸಲನ್ನು ತೆಗೆಯುವುದಾಗಿ ಪಣತೊಡುತ್ತಾನೆ. ಆದರೆ ಅವನ ದುರದೃಷ್ಟವಶಾತ್ ಅವನ ಎಣಿಸಿದ ಅವನಿಗೆ ಬೆಳೆಯನ್ನು ತೆಗೆಯಲಾಗಲಿಲ್ಲ. ನಷ್ಟವನ್ನು ಅನುಭವಿಸುತ್ತಾನೆ. ಆಗ ಮೊದಲಿನ ರೈತ ಅವನ ಬಳಿ ಬಂದು ಸಮಾಧಾನ ಮಾಡುತ್ತಾನೆ. ನೀನು ಈ ಭೂ ತಾಯಿಯ ಮೇಲೆ ಭರವಸೆ ಇಡಲಿಲ್ಲ. ಯಾರೋ ಒಬ್ಬರು ಸಾಧಿಸಿದರು ಅಂತ ಹಠದಿಂದ ಈ ಭೂತಾಯಿ ಮೇಲೆ ಅಧಿಕಾರ ಚಲಾಯಿಸಲು ಹೊರಟೆ ಆದರೆ ಅದರಿಂದ ಏನೂ ಲಾಭವಾಗಿಲ್ಲ ನಿನಗೆ. ನಾನು ಹೊಸ ತಳಿಯನ್ನು ಬಿತ್ತನೆ ಮಾಡುವ ಮೊದಲು ನನ್ನ ಭೂಮಿಯನ್ನು ಅದಕ್ಕೆ ತಕ್ಕನಾಗಿ ಫಲವತ್ತಾಗುವಂತೆ ಮಾಡಿದೆ. ಹಗಲಿರುಳೆನ್ನದೆ ಅದರ ಹಿಂದೆ ದುಡಿದಿದ್ದೇನೆ. ಇದನ್ನೆಲ್ಲವನ್ನು ನೀನು ಗಮನಿಸಲಿಲ್ಲ. ನಾನು ಬೆಳೆದೆ ಅಂತ ನೀನು ನನ್ನ ಮೇಲಿನ ಅಸೂಯೆಯಿಂದ ಬೆಳೆಯಲು ಹೋದೆ ಆದರೆ ಭೂತಾಯಿ ನಿನಗೆ ಸಹಕಾರ ನೀಡಲಿಲ್ಲ. ಮೊದಲು ನೀನು ನಿನ್ನ ಭೂಮಿಯನ್ನು ನಿನ್ನ ತಾಯಿಯ ಹಾಗೆ ಕಾಣು, ಆಗ ನೋಡು ಅದರ ಪರಿಣಾಮ ಎಂದು ಹೇಳಿ ಹೊರಟು ಹೋಗುತ್ತಾನೆ.

ಭೂಮಿಯಷ್ಟೇ ಪವಿತ್ರಳಾದ ಮಾತೆಯನ್ನು ಸದಾ ಪೂಜಿಸಿ ಗೌರವಿಸಿ, ಅವಳ ಆಶೀರ್ವಾದ ನಿಮ್ಮೊಂದಿಗಿದ್ದರೆ ಎಲ್ಲ ಕಷ್ಟವೂ ಮಂಜಿನಂತೆ ಕರಗಿಹೋಗುತ್ತದೆ. ಸಮಸ್ತ ಓದುಗರಿಗೆ ತಾಯಿಯಂದಿರ ದಿನದ ಹಾರ್ದಿಕ ಶುಭಾಶಯಗಳು.

**ಡಾ. ಜ್ಯೋತಿ ಸತೀಶ್**

# ಹೀಗಾದರೆ....

ಆ ದಿನ ನನಗೆ ಸಣ್ಣ ಪ್ರಕರಣಗಳ ನ್ಯಾಯಾಲಯಕ್ಕೆ ಹೋಗುವ ತವಕವಿತ್ತು. ಯಾಕೆಂದರೆ, ಹಿಂದಿನ ದಿನ ನಮ್ಮೂರಿನ ಮಾರುಕಟ್ಟೆ ರಸ್ತೆಯಲ್ಲಿ ನಡೆದ ಒಂದು ಘಟನೆಯ ಬಗ್ಗೆ ಇಂದು ವಿಚಾರಣೆ ನಡೆಯುವುದಿತ್ತು. ಬೆಳಿಗ್ಗೆ ಬೇಗನೆ ಎದ್ದು ಕೆಲಸಗಳನ್ನೆಲ್ಲ ಮುಗಿಸಿಕೊಂಡು ಕಛೇರಿ ಕಡೆ ಹೊರಟೆ. ನಾನು ನ್ಯಾಯಾಲಯ ತಲಪಿದಾಗ ಗಂಟೆ ಹತ್ತೂವರೆ ಆಗಿತ್ತು. ಕಾರ್ಯಾಲಯ ಶುರುವಾಗುವುದು ಹನ್ನೊಂದಕ್ಕೆ ಅಂತ ಅಲ್ಲಿ ತಿಳಿಯಿತು. ಸರಿ ಅಲ್ಲಿಯೇ ಬೆಂಚಿನ ಮೇಲೆ ಕುಳಿತುಕೊಂಡೆ. ಆ ಕೋಣೆಯಲ್ಲಿ ಸುಮಾರು ಹತ್ತು ಜನರಿದ್ದರು. ಕೆಲವರು ಲೋಕಭಿರಾಮಾವಾಗಿ ಪಾರ್ಕ್‌ನಲ್ಲಿ ಕುಳಿತಿರುವಹಾಗೆ ಮಾತಾಡುತ್ತ ಕುಳಿತಿದ್ದರು. ಕೆಲವರ ಮುಖದಲ್ಲಿ ಏನೋ ಒಂದು ತರಹದ ಆತಂಕವಿತ್ತು. ಆದರೆ ನನಗೆ ಕುತೂಹಲ ಕಾಡುತ್ತಿತ್ತು. ಹಾಗೂ ಹೀಗೂ ಗಂಟೆ ಹನ್ನೊಂದಾಯಿತು. ನ್ಯಾಯಾಧೀಶರ ಆಗಮನದ ಸೂಚನೆ ಆಯಿತು. ಎಲ್ಲರೂ ಎದ್ದು ನಿಂತೆವು. ಅವರು ಕುಳಿತಮೇಲೆ ನಾವೆಲ್ಲರೂ ಕುಳಿತೆವು. ಅಲ್ಲಿಯೇ ನಿಂತಿದ್ದ ಗುಮಾಸ್ತ ಆ ದಿನದ ಕೇಸುಗಳ ಪಟ್ಟಿಯನ್ನು ಅವರ ಮುಂದೆ ಇಟ್ಟ. ನ್ಯಾಯಧೀಶರು ಒಂದು ಸರಿ ಆ ಕಡತವನ್ನು ನೋಡಿ ಪಕ್ಕಕ್ಕೆ ಇಟ್ಟು ಏರಿಸಿದ್ದ ಕನ್ನಡಕವನ್ನು ಸರಿಯಾಗಿ ಹಾಕಿಕೊಂಡು ಎಲ್ಲರನ್ನು ಒಂದು ಸಲ ಅವಲೋಕಿಸಿ, ಇಂದಿನ ಕಾರ್ಯಾಕಲಾಪ ಶುರುವಾಗಲಿ ಎಂದುಸಿರಿದರು.

ಮುಂದುಗಡೆ ಕುಳಿತಿದ್ದ ಕೋರ್ಟ್ ಕಾರಕೂನ ಕೇಸ್ ನಂಬರ್ ಓದಿದ ಮೇಲೆ, ಸಂಬಂಧಪಟ್ಟ ವಕೀಲ ತನ್ನ ವಾದ ಮಂಡಿಸಿ ತೀರ್ಪು ಪಡೆದ. ಮುಂದೆ ಇನ್ನೊಂದೆರಡು ಕೇಸುಗಳ ತೀರ್ಪು ಸಹ ಮುಗಿಯಿತು. ಕೊನೆಗೊಮ್ಮೆ ನಾನು ಕಾಯುತ್ತಲ್ಲಿದ್ದ ಕೇಸ್‌ನ ವಿಚಾರಣೆಗೆ ಕರೆಯಲಾಯಿತು. ಆದೇಶದ ಮೇರೆಗೆ, ಒಬ್ಬ ಮಹಿಳಾ ಪೋಲಿಸ್ ಒಬ್ಬ ಭಿಕ್ಷುಕಿಯ ಹಾಗೆ ಕಾಣುವ ವ್ಯಕ್ತಿಯನ್ನು ಕರೆತಂದು ನಿಲ್ಲಿಸಿದಳು. ನ್ಯಾಯಾಧೀಶರು ಏನಿವಳ ಅಪರಾಧ ಎಂದು ಕೇಳಿದಾಗ, ಒಬ್ಬ ವಕೀಲ ಎದ್ದು ನಿಂತು "ಯುವರ್ ಆನರ್, ಈಕೆ, ನೆನ್ನೆ ಬೆಳಿಗ್ಗೆ, ಈ ಎದುರಿಗೆ ನಿಂತಿರುವ ವರ್ತಕನ ಅಂಗಡಿಗೆ ಕಲ್ಲು ಎಸೆದು ಅಂಗಡಿಯ ಗಾಜುಗಳೆನ್ನೆಲ್ಲ ಒಡೆದಿದ್ದಾಳೆ. ಈ ವರ್ತಕನಿಗೆ ಬಹಳ ನಷ್ಟ ಆಗಿದೆ. ಅಲ್ಲಿ ನೆರೆದಿದ್ದ ಜನರ ಗುಂಪನ್ನು ನೋಡಿ ಪೋಲೀಸ್ ಅಲ್ಲಿಗೆ ಬಂದು ಈಕೆಯನ್ನು ಹಿಡಿದು ಠಾಣೆಗೆ ಕರೆತಂದರು. ಬಳಿಕ ಈ ವರ್ತಕ ದೂರು ನೀಡಿದ್ದರ ಮೇರೆಗೆ ಈಕೆಯ್ನನು ಬಂಧಿಸಿ ನ್ಯಾಯಾಲಯದಲ್ಲಿ ಹಾಜಿರ್ ಮಾಡಿದ್ದಾರೆ." ನ್ಯಾಯಾಧೀಶೆ, ಆ ಮಹಿಳೆಯನ್ನು, ಕೇಳುತ್ತಾ, ಇದು ನಿಜವೇ? ನಿಜ ಆಗಿದ್ದರೆ ನೀ ಯಾಕೆ ಹಾಗೆ ಮಾಡಿದೆ ಎಂದಾಗ, ಆ ಹೆಂಗಸು ಯಾವುದೇ ರೀತಿಯ ಪ್ರತಿಕ್ರಿಯೆನ್ನು ಕೊಡಲಿಲ್ಲ. ನೆಲ, ಮೇಲೆ, ಕೆಳಗೆ, ಅತ್ತ, ಇತ್ತ ನೋಡುತ್ತಾ ಸುಮ್ಮನೆ ನಿಂತಿದ್ದಳು. ಎಷ್ಟು ಸರ್ತಿ ಕೇಳಿದಾಗಲೂ ಉತ್ತರ ಬಾರದ್ದನ್ನು ಕಂಡು ನ್ಯಾಯಾಧೀಶೆ, ಆ ಮಹಿಳೆಗೆ ಶಿಕ್ಷೆ ಕೊಡಲು ತಯಾರಾದರು.

ನನಗೆ, ಇನ್ನು ತಡೆಯಲಾಗಲಿಲ್ಲ. ನಾನು ಎದ್ದು ನಿಂತು, "ಯುವರ್ ಆನರ್, ನೀವು ತೀರ್ಪು ಕೊಡುವ ಮೊದಲು, ನನಗೆ ಅವಕಾಶ ಕೊಟ್ಟರೆ ನಾನು ಕೆಲವು ವಿಷಯಗಳನ್ನು ತಿಳಿಸ ಬಯಸುತ್ತೇನೆ" ಎಂದು ಹೇಳಿದೆ. ಮೊದಲು ವಾದ ಮಂಡಿಸಿದ್ದ ವಕೀಲ ಇದಕ್ಕೆ ಆಕ್ಷೇಪಣೆ ಮಾಡಿದ. ಕೇಸಿಗೆ ಸಂಬಂಧವಿಲ್ಲದವರಿಗೆ ಅವಕಾಶ ಇಲ್ಲ ಎಂದು ಬಲವಾಗಿ ವಾದಿಸಿದ. ನ್ಯಾಯಾಧೀಶೆ ನನ್ನತ್ತ ನೋಡುತ್ತಾ, ನನಗೂ ಈ ಕೇಸಿಗೂ ಏನು ಸಂಬಂಧ ಎಂದು ಕೇಳಿದರು. ಈ ಮಹಿಳೆಯ ಪರಿಚಯ ನಿಮಗಿದೆಯೇ ಎಂದೂ ಕೇಳಿದರು. ನಾನು ಅದೆಲ್ಲವನ್ನು ನಿರಾಕರಿಸಿದೆ. ಮತ್ತೆ ನೀವ್ಯಾಕೆ ಮಧ್ಯೆ ಮಾತಾಡುತ್ತೀರಿ ಎಂದು ನನ್ನನ್ನು ಕೇಳಿದಾಗ. ನಾನು "ಯುವರ್ ಆನರ್, ನನಗೂ ಈ ಕೇಸಿಗೂ ಅಥವಾ, ಈ ಮಹಿಳೆಗೂ ಯಾವುದೇ ತರಹದ ಸಂಬಂಧ ಇಲ್ಲ. ಅಥವಾ, ನ್ಯಾಯಾಲಯದ ಸಮಯ ವ್ಯರ್ಥವಾಗಿ ಹಾಳು ಮಾಡುವುದೂ ನನ್ನ ಇಚ್ಛೆ ಅಲ್ಲ. ಆದರೆ, ನಾನು ಈ ದೇಶದ ಸತ್ಪ್ರಜೆ, ಒಬ್ಬ ನಾಗರೀಕನಾಗಿ ನಡೆದ ಘಟನೆಯನ್ನು ಹೇಳಬೇಕಾಗಿದೆ. ನೆನ್ನೆ ಘಟನೆ ನಡೆದಾಗ ನಾನು ಆ ಸ್ಥಳದಲ್ಲಿದ್ದೆ, ನಡೆದದ್ದನ್ನೆಲ್ಲ ನೋಡಿದೆ. ಅದ್ದರಿಂದ ಅಲ್ಲಿ ನಡೆದದ್ದನ್ನು ನ್ಯಾಯಾಲಯಕ್ಕೆ ಯಾರೂ ಸರಿಯಾಗಿ ಹೇಳದಿದ್ದ ಕಾರಣ ತಾವು ತೀರ್ಪು ಕೊಡುವ ಮೊದಲು ನಾನು ಹೇಳುವದನ್ನು ಪರಿಶೀಲಿಸಿ ಆನಂತರ ದಯವಿಟ್ಟು ತೀರ್ಪು ನೀಡಬೇಕೆಂದು ನನ್ನ ಪ್ರಾರ್ಥನೆ". ನ್ಯಾಯಾಧೀಶರು ನನ್ನ ಪ್ರಾರ್ಥನೆಯನ್ನು ಕೇಳಿ ಕೆಲ ಘಳಿಗೆ ಸುಮ್ಮನಿದ್ದರು. ಯೋಚನೆ ಮಾಡುವ ಹಾಗೆ ತೋರಿತು. ಆಮೇಲೆ ನನ್ನನು ಕಛೇರಿಯ ಮಧ್ಯಕ್ಕೆ ಕರೆದು, "ಸರಿ, ಅವಕಾಶ ಕೊಡುತ್ತೇನೆ. ಆದರೆ ಜಾಸ್ತಿ ಸಮಯ ಕೊಡುವುದಿಲ್ಲ. ನಡೆದ ಘಟನೆಯನ್ನು ಬಿಟ್ಟು ಬೇರೇನೂ ಹೇಳುವುದಕ್ಕೆ ಅವಕಾಶವಿಲ್ಲ. ನೀವು ಹೇಳುವುದರಲ್ಲಿ, ನ್ಯಾಯಾಲಯಕ್ಕೆ ನಿಜ ಕಾಣದಿದ್ದಲ್ಲಿ, ನಿಮಗೆ ಶಿಕ್ಷೆಯೂ ಆಗಬಹುದು, ಇದು ನಿಮ್ಮ ಗಮನದಲ್ಲಿರಲಿ. ನಾನು ತಲೆ ಬಾಗಿ ಒಪ್ಪಿಕೊಂಡೆ. ಹೇಳುವುದಕ್ಕೆ ಆರಂಭಿಸಿದೆ. "ಯುವರ್ ಆನರ್, ನೆನ್ನೆ ನಡೆದದ್ದು ಹೀಗೆ. ಬೆಳಗ್ಗಿನ ಸುಮಾರು ಹತ್ತು ಘಂಟೆಯ ಸಮಯ. ಅಂಗಡಿಗಳ ಬಾಗಿಲು ತೆರೆಯಲಾರಂಭಿಸಿದ್ದವು. ನನಗೆ ಕೆಲವು ಔಷಧಿಗಳನ್ನು ಖರೀದಿಸುವುದಿತ್ತು. ಔಷಧಿಯ ಅಂಗಡಿಯ ಬಾಗಿಲು ಇನ್ನೂ ತೆಗೆದಿಲ್ಲದ್ದರಿಂದ ನಾನು ಆ ಅಂಗಡಿಯ ಮೆಟ್ಟಲ ಮೇಲೆ ಕುಳಿತಿದ್ದೆ. ಮಾರುಕಟ್ಟೆಯಲ್ಲಿ ನಡೆಯುತ್ತಿದ್ದ ಚಲನವಲನಗಳನ್ನು ಗಮನಿಸುತ್ತಿದ್ದೆ. ಕೆಲಸಕ್ಕೆ ಹೋಗುವರ ಆತುರ, ತರಾತುರಿ, ಬೆಳಗ್ಗಿನ ವಾಕಿಂಗ್ ಹೋಗುತ್ತಿರುವ ವೃದ್ಧರು, ಬೆಳಗಿನ ಖರೀದಿಗೆಂದು ಬೀದಿಗೆ ಬಂದಿರುವ ಮಹಿಳೆಯರು, ಶಾಲೆಗೆ ಹೋಗುತ್ತಲಿರುವ ಮಕ್ಕಳ ಕೂಗಾಟ. ಈ ಜನಗಳ ಚಟುವಟಿಕೆಗಳನ್ನು ನೋಡುತ್ತ ಕುಳಿತಿದ್ದೆ. ಆಗ ನನ್ನ ಗಮನ ಒಬ್ಬ ಭಿಕ್ಷೆ ಬೇಡುತ್ತಿದ್ದ ಹೆಂಗಸಿನ ಮೇಲೆ ಹರಿಯಿತು. ಒಂದು ಕಡೆಯಿಂದ ತೆರೆಯುತ್ತಿದ್ದ ಅಂಗಡಿಗಳ ಮುಂದೆ ಕೈ ಚಾಚಿ ಭಿಕ್ಷೆ ಬೇಡುತ್ತಿದ್ದಳು. ಅಂಗಡಿಯವರು ಕೆಲವರು ಕೈ ಸನ್ನೆಯಿಂದ ಮತ್ತೆ ಕೆಲವರು ಬಾಯಿಂದ ಆಕೆಯನ್ನು ಮುಂದಕ್ಕೆ ಹೋಗಲು ಹೇಳುತ್ತಿದ್ದರು. ಆಕೆ ಮಾತ್ರ ಯಾರಿಗೂ ಏನೂ ಹೇಳದೆ, ಮುಂದಿನ ಅಂಗಡಿಯ ಮುಂದೆ ಕೈ ಚಾಚಿ ನಿಲ್ಲುತ್ತಿದ್ದಳು. ಕೆಲ ಸಮಯದ ನಂತರ, ಈ ವರ್ತಕನ ಬೇಕರಿ ಅಂಗಡಿಯ ಮುಂದೆ ನಿಂತಳು ಕೈ ಚಾಚುತ್ತ. ಆದರೆ ಈ ವರ್ತಕ ಬಹಳ ಕೆಟ್ಟದಾಗಿ ವರ್ತಿಸಿದ. "ದುಡ್ಡು ಇದ್ಯಾ ಎಂದು ಒಂದು ಥರಹ ಅವಹೇಳನದ ನಗೆ ನಕ್ಕು ಕೇಳಿದ". ದುಡ್ಡು ಇದ್ದಿದ್ದರೆ ಆಕೆ ಭಿಕ್ಷೆ ಯಾಕೆ ಬೇಡುತ್ತಿದ್ದಳು? ಆ ಭಿಕ್ಷುಕಿ ಏನೂ ಉತ್ತರಿಸದೆ, ಕೈ ಚಾಚಿಯೇ ನಿಂತಿದ್ದಳು. ಆಗ ಆ ವರ್ತಕ, ಆಕೆಯನ್ನೇ ಎವೆಯಿಕ್ಕದೇ ನೋಡುತ್ತಾ, "ದುಡ್ಡಿಲ್ಲದ್ದಿದ್ದರೆ ಸಂಪಾದಿಸು. ನೋಡೋಕೆ ಚೆನ್ನಾಗಿಯೇ ಇದ್ದೀಯ. ಈ ದೇಹ ಇಟ್ಕೊಂಡು ಒಳ್ಳೆ ದುಡ್ಡು ಸಂಪಾದಿಸಬಹುದು. ಅದನ್ನು ಬಿಟ್ಟು ಹೀಗ್ಯಾಕೆ ಬೀದಿ ಬೀದಿ ಅಲೀತಾ ಭಿಕ್ಷೆ ಬೇಡ್ತಿಯಾ? ರಾತ್ರಿ ಹೊತ್ತು ಕೆಲಸ ಮಾಡು ಬೆಳಿಗ್ಗೆ ಹೊತ್ತು ಹೀಗೆ ಭಿಕ್ಷೆ ಎತ್ತೋದೇ ಬೇಕಿಲ್ಲ". ಹೀಗೆ ಇನ್ನೂ ಅಸಹ್ಯವಾದ ಮಾತುಗಳನ್ನು ಹೇಳುತ್ತಾ ಕೇಕೆ ಹಾಕಿ ಜೋರಾಗಿ ನಗಲು ಶುರು ಮಾಡಿದ. ಅವನ ಜೊತೆಗೆ, ಅಲ್ಲಿದ್ದ ಉಳಿದ ಜನರೂ ಜೋರಾಗಿ ನಕ್ಕರು. ನನ್ನ ಮನಸ್ಸಿಗೆ ಬಹಳ ಕಸಿವಿಸಿಯಾಯಿತು ಬೇಜಾರಾಯಿತು. ಈ ಜನಗಳ ಮೇಲೆ ಅಸಹ್ಯ ಹುಟ್ಟಿತು. ಯಾರಿಗೂ ಆ ಬಡ ಹೆಂಗಸಿನ ಮೇಲೆ ಕರುಣೆ, ಅನುಕಂಪವೇ ಇಲ್ಲವೇ. ಛೆ ಎಂಥ ಕೆಟ್ಟ ಜನರು ಅನ್ನಿಸಿತು. ನೋಡುತ್ತಾ, ನೋಡುತ್ತಾ, ಆ ಭಿಕ್ಷುಕಿಯ ಮುಖಚರ್ಯೆ ಬದಲಾಯಿತು. ಆಕೆಯ ಮುಖದಲ್ಲಿ ಕೋಪದ ಛಾಯೆ ಕಾಣಿಸತೊಡಗಿತು. ಕೆಲ ಕ್ಷಣದಲ್ಲಿ, ಅಲ್ಲೇ ಇದ್ದ ಕಲ್ಲುಗಳನ್ನು ಎತ್ತಿಕೊಂಡು, ಅಂಗಡಿಯ ಮೇಲೆ ಎಸೆಯತೊಡಗಿದಳು. ಈ ವರ್ತಕ ಮತ್ತು ಆ ಅಂಗಡಿಯ ಕೆಲಸಗಾರರು ಆ ಕಲ್ಲೆಸದಿಂದ ತಪ್ಪಿಸಿಕೊಂಡರು. ಆದರೆ, ಅಂಗಡಿಯ ಗಾಜುಗಳೆಲ್ಲ ಒಡೆದು ಚೂರಾದವು. ಅದನ್ನು ಕಂಡ ಆ ವರ್ತಕ, ಎಲ್ಲ ತರಹದ ಕೆಟ್ಟ, ಅವಾಚ್ಯ ಮತ್ತು ಅಸಹ್ಯವಾದ ಶಬ್ದಗಳಿಂದ ಬೈಯ್ಯಲಾರಂಭಿಸಿದ. ಜನರ ಗುಂಪೇ ಅಲ್ಲಿ

✍ ರುಸೂರಂ

ಸೇರಿತು. ಎಲ್ಲರೂ ಆ ಭಿಕ್ಷುಕಿಯನ್ನೇ ಮೂದಲಿಸುತ್ತಿದ್ದರು. ಆ ಗುಂಪು, ಗಲಾಟೆ ಕಂಡು ಅಲ್ಲಿಯೇ ಇದ್ದ ಈ ಮಹಿಳಾ ಪೋಲೀಸ್ ಅಲ್ಲಿಗೆ ಬಂದಾಗ, ಈ ವರ್ತಕ ಆ ಭಿಕ್ಷೆ ಬೇಡುತ್ತಿರುವ ಹೆಂಗಸಿನ ಮೇಲೆ ದೂರು ಕೊಟ್ಟನು. ಪೋಲೀಸ್ ತಾನೂ ಸಹ ಒಬ್ಬ ಹೆಂಗಸು ಅನ್ನುವುದನ್ನೂ ಮರೆತು ಎಲ್ಲಾ ತರಹದ ಕೆಟ್ಟ ಶಬ್ದಗಳಿಂದ ಬೈಯ್ಯಲಾರಂಭಿಸಿದಳು. ಮತ್ತೆ ಆ ಭಿಕ್ಷುಕಿಯ ಕೈಯ್ಯನ್ನು ಹಗ್ಗದಿಂದ ಕಟ್ಟಿ ಬಿಗಿದು ಪೋಲೀಸ್ ಥಾಣೆಗೆ ಎಳೆದುಕೊಂಡು ಹೋದಳು. ಯುವರ್ ಆನರ್, ಈ ವರ್ತಕ ಮತ್ತು ಈ ಪೋಲೀಸ್ ಮಹಿಳೆ ಆ ಭಿಕ್ಷುಕಿಗೆ ಉಪಯೋಗಿಸಿದ ಅಸಹ್ಯವಾದ ಶಬ್ದಗಳನ್ನು ನಾನು ಈ ಘನ ನ್ಯಾಯಾಲಯದ ಮುಂದೆ ಪುನ: ಉಚ್ಚರಿಸಲು ಅಶಕ್ತ. ಅದಕ್ಕೆ ಕ್ಷಮೆ ಕೋರುತ್ತೇನೆ.

ಮುಂದೆ ನಡೆದ್ದಿದ್ದೆಲ್ಲ ನಿಮಗೇ ಗೊತ್ತಿದೆ ಯುವರ್ ಆನರ್. ಆದರೆ ನಾನು ಈ ಘನ ನ್ಯಾಯಾಲಯವನ್ನು ಕೇಳುವುದಿಷ್ಟೆ ಭಿಕ್ಷೆ ಬೇಡುವುದು ಕಾನೂನು ರೀತ್ಯಾ ಸರಿಯೋ ತಪ್ಪೋ ನನಗೆ ಗೊತ್ತಿಲ್ಲ. ಆದರೆ ಎಲ್ಲ ನಾಗರಿಕರಿಗೆ ಹೊಟ್ಟೆ ತುಂಬಿಸಿಕೊಳ್ಳುವ ಅಧಿಕಾರ ಇದೆ ಎಂದು ನನ್ನ ನಂಬಿಕೆ. ಈ ಹೆಂಗಸಿಗೂ ಹೊಟ್ಟೆ ಹಸಿವನ್ನು ಇಂಗಿಸಿಕೊಳ್ಳಬೇಕಾಗಿತ್ತು. ಅದಕ್ಕೆ ಈ ಅಶಿಕ್ಷಿತೆ, ಅವಿದ್ಯಾವಂತೆ ಭಿಕ್ಷೆ ಬೇಡುತ್ತಿದ್ದಳು. ಆಕೆಗೂ ಜೀವಂತ ಇರುವ ಹಕ್ಕಿದೆ. ಈಕೆ ಅವಿದ್ಯಾವಂತೆಯಾದರೂ ಆಕೆಗೂ ಅವಳ ಮಾನ, ಮರ್ಯಾದೆ ಕಾಪಾಡಿಕೊಳ್ಳುವ ಹಕ್ಕೂ ಇದೆ. ಆದ್ದರಿಂದಲೇ ಆಕೆ ಆ ವರ್ತಕನ ಅವಾಚ್ಯ ಶಬ್ದಗಳನ್ನು ಕೇಳಿ ಕಲ್ಲುಗಳಿಂದ ಪ್ರಹಾರ ಮಾಡಿದಳು. ಭಿಕ್ಷೆ ಕೊಡುವುದು ಬಿಡುವುದು ವೈಯುಕ್ತಿಕ ವಿಷಯ. ಆದರೆ ಯಾರೂ ಯಾರಿಗೂ ಅದರಲ್ಲೂ ಒಬ್ಬ ಹೆಂಗಸಿಗೆ ಕೆಟ್ಟ ಅವಾಚ್ಯ ಅಸಹ್ಯ ಶಬ್ದಗಳಿಂದ ಬೈಯ್ಯುವ ಅಥವಾ ಅವಮಾನಿಸುವ, ಅವಹೇಳನ ಮಾಡುವ ಅಧಿಕಾರವಿಲ್ಲ ಅನ್ನೋದೂ ನನ್ನ ನಂಬಿಕೆ. ಅದು ಕಾನೂನು ಬಾಹಿರ. ಅದೂ ಅಲ್ಲದೆ, ಕಾನೂನನ್ನು ಪಾಲಿಸಬೇಕಾಗಿರುವ ಈ ಪೋಲೀಸ್ ಸಹ ಆ ಭಿಕ್ಷುಕಿ ಹೆಂಗಸನ್ನು ತಾನೂ ಮೊದಲೊಬ್ಬ ಹೆಂಗಸು ಆಮೇಲೆ ಪೋಲೀಸ್ ಅನ್ನೋದನ್ನು ಮರತು ಕೆಟ್ಟ ಕೆಟ್ಟ ಶಬ್ದಗಳಿಂದ ಬೈದಳು. ಈ ಭಿಕ್ಷುಕಿ ಅವಿದ್ಯಾವಂತೆ, ಅಶಿಕ್ಷಿತೆಯಾದರೂ ಆಕೆಗೂ ಅವಳ ಮಾನ ಕಾಪಡಿಕೊಳ್ಳುವ ಅಧಿಕಾರವಿದೆ. ಆದ್ದರಿಂದ ಅವಳ ಆ ಪ್ರತಿಕ್ರಿಯೆ ಏನೂ ಆಶ್ಚರ್ಯವಿಲ್ಲ.

ಯುವರ್ ಆನರ್, ಭಿಕ್ಷುಕಿ ಮಾಡಿದ್ದು ಅಪರಾಧ ಹೌದು. ಶಿಕ್ಷೆ ಆಗಲೇಬೇಕು ನಿಜ. ಆದರೆ ಈ ವರ್ತಕನ ಮಾತು, ಈ ಪೋಲೀಸ್ ನಡೆದುಕೊಂಡ ರೀತಿ ಎಷ್ಟು ಸರಿಯಾಗಿದೆ ಯುವರ್ ಆನರ್? ವರ್ತಕನ ಅಂಗಡಿಗಾದ ನಷ್ಟವನ್ನ ವಿಮಾ ಕಂಪನಿ ಭರಿಸುತ್ತದೆ. ಆದರೆ, ಈ ಹೆಂಗಸಿಗಾದ ಅವಮಾನಕ್ಕೆ ಯಾವ ಪರಿಹಾರವೂ ಇಲ್ಲವೇ ಯುವರ್ ಆನರ್? ಔಟ್‌ರೇಜಿಂಗ್ ಆಫ್ ದಿ ಮಾಡೆಸ್ಟಿ ಆಫ್ ಎ ವುಮನ್ ಅಥವಾ ಮಾಲೆಸ್ಟೇಶನ್ ಕೇಸ್ ಹಾಕಬಹುದಲ್ಲ? ಆದರೆ, ಘನ ನ್ಯಾಯಾಲಯ ಇವರುಗಳಿಗೆ ಶಿಕ್ಷೆ ವಿಧಿಸಬೇಕಾದರೆ, ಅವರು ಮಾಡಿರುವ ತಪ್ಪು, ಅಪರಾಧಗಳಿಗೆ ಸಾಕ್ಷ್ಯಾಧರಗಳನ್ನು ಕೇಳುತ್ತದೆ. ನನ್ನಲ್ಲಿ ಯಾವುದೇ ತರಹದ ಸಾಕ್ಷಿ ಅಥವಾ ಆಧಾರಗಳಿಲ್ಲ. ಅಲ್ಲಿ ನಡೆದದ್ದನ್ನು ನಾನು ಕಣ್ಣಾರೆ ನೊಡಿದ್ದೇನೆ ಮತ್ತು ಕಿವಿಯಾರೆ ಕೇಳಿದ್ದೇನೆಯೇ ಹೊರೆತು ಯಾವುದೇ ರೆಕಾರ್ಡ್ ಮಾಡಿಕೊಂಡಿಲ್ಲ ಆದರೆ ನಾನು ಹೇಳಿದ ಮಾತುಗಳೆಲ್ಲ ಸತ್ಯ.

ನಾನು ಹೇಳಬೇಕೆಂದ್ದುದನ್ನೆಲ್ಲಾ ಸತ್ಯವಾಗಿ ಹೇಳಿದ್ದೇನೆ. ನನ್ನಿಂದ ಅಥವಾ ನನ್ನ ವರ್ತನೆಯಿಂದ ನ್ಯಾಯಾಲಯಕ್ಕೆ ಯಾವುದೇ ತರಹದ ಅಚಾತುರ್ಯ ಅಥವಾ ನ್ಯಾಯಾಲಯದ ಘನತೆಗೆ ಕುಂದು ಬಂದಿದೆ ಎಂದು ಪರಿಗಣಿಸಿದರೆ, ಅಥವಾ ನ್ಯಾಯಾಲಯದ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡಿದ್ದೇನೆ ಎಂದು ಮನಗಂಡಲ್ಲಿ, ನ್ಯಾಯಾಲಯ ವಿಧಿಸುವ ಯಾವದೇ ತರಹದ ಶಿಕ್ಷೆಯನ್ನು ನಾನು ಅನುಭವಿಸಲು ತಯಾರಿದ್ದೇನೆ. ನಾನು ಕಣ್ಣಾರೆ ಕಂಡದ್ದನ್ನು ನನಗೆ ನ್ಯಾಯಲಯದ ಮುಂದೆ ಮಂಡಿಸಲು ಅವಕಾಶ ಮಾಡಿ ಕೊಟ್ಟಿದ್ದಕ್ಕೆ ನಾನು ಚಿರಋಣಿ.''

ನಾನು ಮಾತನ್ನು ನಿಲ್ಲಿಸಿದ ಮೇಲೆ ಆವರಣ ಕೆಲ ಕ್ಷಣ ನಿಶ್ಶಬ್ದವಾಯಿತು. ಇದ್ದ ಹತ್ತು ಹನ್ನೊಂದು ಜನರೂ ಸಹ ಸುಮ್ಮನಿದ್ದರು. ಸ್ವಲ್ಪ ನಿಮಿಷಗಳ ನಂತರ, ನ್ಯಾಯಾಧೀಶೆ, ಗಂಟಲು ಸರಿಮಾಡಿಕೊಂಡು, ಕನ್ನಡಕವನ್ನು ಸರಿಯಾಗಿರಿಸಿಕೊಂಡು, ತಮ್ಮ ನಿರ್ಣಯದ ಮಾತುಗಳನ್ನು ಹೇಳರಾಂಭಿಸಿದರು.

"ನನ್ನ ಈ ವೃತ್ತಿಯಲ್ಲಿ, ಇದೇ ಮೊದಲ ಸಲ ಕೇಸಿಗೆ ಸಂಬಂಧವಿಲ್ಲದ ಒಬ್ಬ ವ್ಯಕ್ತಿಗೆ ಕೇಸಿನ ಬಗ್ಗೆ ಮಾತಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಯೋಚನೆ ಮಾಡಿದಾಗ, ಒಂದು ರೀತಿಯಲ್ಲಿ ಅವಕಾಶ ಮಾಡಿಕೊಟ್ಟದ್ದು ಸರಿಯಾಗಿಯೇ ಇದೆ ಎಂದು ಅನ್ನಿಸುತ್ತದೆ. ಯಾರಿಂದಲಾದರೂ ಸರಿ, ನಿಜವಾಗಿ ನಡೆದಿದ್ದು ಏನು ಎಂದು ಗಮನಕ್ಕೆ ಬಂದಿದೆ. ಬಹಳ ಸಲ, ವಕೀಲರು, ಪೋಲೀಸರು ಮಾಡಿದ್ದು ಸರಿ ಅಂತ ಪರಿಗಣಿಸಿ ತೀರ್ಪನ್ನು ಕೊಟ್ಟುಬಿಡುತ್ತೇವೆ. ಎಷ್ಟೋ ಸಲ, ಸಮಯಾಭಾವದಿಂದ ಅಥವಾ ನಿರ್ಬಲವಾದ ಸಾಕ್ಷ್ಯಾಧಾರಗಳಿಂದ, ಕೊಡುವ ತೀರ್ಪುಗಳೂ ಸಹ ಸರಿಯಾಗಿರುವುದಿಲ್ಲ. ಆದರೆ ಕಾನೂನಿನ ಚೌಕಟ್ಟಿನಲ್ಲಿಯೇ ಇದ್ದುಕೊಂಡು ತೀರ್ಪುಗಳನ್ನು ಕೊಡಬೇಕಾಗುತ್ತದೆ. ಈ ನ್ಯಾಯಾಲಯದೆದುರಿಗೆ ಈ ನಾಗರಿಕ ಹೇಳಿದ ಮಾತಿನಲ್ಲಿ ಸತ್ಯ ಇದೆ, ನೈಜತೆ ಇದೆ. ಈ ದೇಶದ ಎಲ್ಲಾ ನಾಗರಿಕರಿಗೂ ಮಾನದಿಂದ ಬದುಕುವ ಹಕ್ಕಿದೆ. ಬಡವ, ಶ್ರೀಮಂತ, ಭಿಕ್ಷುಕಿ ಎಂಬ ತಾರತಮ್ಯ ಕಾನೂನಿಗಿಲ್ಲ. ಎಲ್ಲರಿಗೂ ಈ ದೇಶದ ಕಾನೂನು ಒಂದೇ. ಎಲ್ಲರಿಗೂ ಸರಿಸಮಾನದ ಹಕ್ಕಿದೆ, ಅಧಿಕಾರವಿದೆ. ಭಿಕ್ಷುಕಿಯಾದರೂ, ಆಕೆಗೂ ಬದುಕುವ, ಜೀವಿಸುವ ಹಕ್ಕಿದೆ. ಆಕೆಗೂ ಆಕೆಯ ಮಾನ ಕಾಪಾಡಿಕೊಳ್ಳುವ ಅಧಿಕಾರವಿದೆ. ವಿದ್ಯೆ ಕಲಿಯುವುದು ಬರೀ ಹಣ ಸಂಪಾದನೆಗಲ್ಲ. ಸಮಾಜದಲ್ಲಿ ಒಬ್ಬ ಒಳ್ಳೆಯ ವ್ಯಕ್ತಿಯಾಗಿ ಇನ್ನೊಬ್ಬರಿಗೆ ಅನುಕೂಲ ಮಾಡಿಕೊಡಬೇಕು. ಸಮಾಜಕ್ಕೆ ಒಬ್ಬ ಮಾದರಿಯ ಮಾನವನಾಗಬೇಕು. ಇದು ವಿದ್ಯೆಯ ನಿಜವಾದ ಉದ್ದೇಶ. ಹಣ ಮತ್ತು ಅಧಿಕಾರವಿದೆ ಎಂದು ಅಮಾನವೀತೆಯಿಂದ ವರ್ತಿಸುವುದು ಅಪರಾಧ. ಹಣ, ಮತ್ತು ಅಧಿಕಾರದ ದರ್ಪದಿಂದ, ಮನುಷ್ಯತ್ವವನ್ನು ಮರೆಯಬಾರದು. ಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಆಗದಿದ್ದರೆ ಪರವಾಗಿಲ್ಲ. ಆದರೆ ಅವರಿಗೆ ಕೆಡಕನ್ನು ಖಂಡಿತಾ ಮಾಡಬೇಡಿ.

ಈಗ ಈ ಕೇಸಿನ ವಿಚಾರಕ್ಕೆ ಬರೋಣ. ಇಲ್ಲಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗಿರುವ ಈ ಹೆಂಗಸಿನ ಮೇಲೆ ಹಾಕಿರುವ, ಈ ವರ್ತಕರ ಅಂಗಡಿಯ ಮೇಲೆ ಕಲ್ಲುಗಳನ್ನು ಎಸೆದು ಅವರ ಅಂಗಡಿಗೆ ಬಹಳ ನಷ್ಟ ಉಂಟು ಮಾಡಿದ್ದಾಳೆ ಎಂಬ ದೂರು ನಿಜ ಎಂದು ಸಾಬೀತಾಗಿದೆ.

ಈ ಅವಿದ್ಯಾವಂತ, ಅಶಿಕ್ಷಿತೆ ಮತ್ತು ಭಿಕ್ಷೆಯಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ಈ ಮಹಿಳೆ ಆ ರೀತಿಯಾಗಿ ಕೋಪದಿಂದ ವರ್ತಿಸಲು ಕಾರಣ, ಈ ದೂರು ಕೊಟ್ಟಿರುವ ವರ್ತಕರ ಅಸಭ್ಯ, ಅಸಹ್ಯವಾದ ಮತ್ತು ಕಟುವಾದ ಮಾತುಗಳು. ಅದರಿಂದಲೇ ಆಕೆ ಪ್ರಚೋದಿತಳಾಗಿ ಹಾಗೆ ಪ್ರತಿಕ್ರಿಯಿಸಿದಳು ಎಂಬುದು ನ್ಯಾಯಾಲಯಕ್ಕೆ ತಿಳಿದು ಬಂದರೂ, ರುಜುವಾತಾಗಿಲ್ಲ. ಆದ್ದರಿಂದ, ಈ ನ್ಯಾಯಾಲಯವು, ಈ ಮಹಿಳೆಯ ಬದುಕಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ರೀತಿಯ ಶಿಕ್ಷೆಯನ್ನು ನೀಡುತ್ತಿಲ್ಲ. ಈಕೆಯ ಒಳಿತಿನ ಜವಾಬ್ದಾರಿಯನ್ನು, ಸರ್ಕಾರದ ಮಹಿಳಾ ಮತ್ತು ಸಮಾಜ ಕಲ್ಯಾಣ ವಿಭಾಗಕ್ಕೆ ಸೂಕ್ತ ಪರಿಹಾರ ನೀಡಲು ಆದೇಶಿಸುತ್ತಿದೆ. ಮತ್ತು ಈ ಆದೇಶ ಪರಿಪಾಲನೆಯಾಗಿರುವ ವರದಿಯನ್ನು ಈ ನ್ಯಾಯಾಲಯಕ್ಕೆ ಮೂರು ವಾರದೊಳಗಾಗಿ ಮಂಡಿಸಬೇಕೆಂದು ಸೂಚಿಸುತ್ತದೆ.

ಮತ್ತು, ಈ ವರ್ತಕ ಮತ್ತು ಪೋಲೀಸ್ ಸಿಬ್ಬಂದಿಗೆ ಈ ಮೂಲಕ ಸೂಚಿಸುವುದೇನೆಂದರೆ, ನಿಮ್ಮಗಳ ಮೇಲೆ ಯಾವುದೇ ಕೇಸ್ ಇಲ್ಲದಿದ್ದರೂ, ನೀವುಗಳು ಒಳ್ಳೆಯ ನಾಗರಿಕರಾಗಿ ವರ್ತಿಸಬೇಕು. ಪೋಲೀಸ್‌ನವರು, ಕಾನೂನನ್ನು ಪರಿಪಾಲಿಸುವದರ ಜೊತೆಗೆ, ಜನರೊಡನೆ ಸ್ನೇಹದಿಂದ ಇರಬೇಕು ಎಂದು ಸೂಚಿಸಲಾಗಿದೆ. ಮುಂದೆ ಯಾವಾಗಲಾದರೂ ನಿಮ್ಮ ವರ್ತನೆಯ ಬಗ್ಗೆ ಆಪಾದನೆ ಕಂಡು ಬಂದಲ್ಲಿ, ನಿಮ್ಮ ಮೇಲೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಲಾಗುವುದು ಎಚ್ಚರವಿರಲಿ.

ಕೇಸಿಗೆ ಯಾವುದೇ ರೀತಿಯ ಸಂಬಂಧವಿಲ್ಲದಿದ್ದರೂ, ನಿಜವಾಗಿ ನಡೆದ ಘಟನೆಯನ್ನು ಈ ಮೂಲಕ ತಿಳಿಸಿದ್ದನ್ನು ಈ ನ್ಯಾಯಾಲಯ ಗಮನಕ್ಕೆ ತೆಗೆದುಕೊಂಡಿದೆ. ಮತ್ತು ಇದನ್ನು ತಿಳಿಸಿದವರನ್ನು ಈ ನ್ಯಾಯಾಲಯವು ಶ್ಲಾಘಿಸುತ್ತದೆ.'' ■

# ಸುಮಸಂಚಯ ವೈವಿಧ್ಯಮಯ ಕೃತಿ

**– ಡಾ. ಜಿ. ಎನ್. ಉಪಾಧ್ಯ**

'ನರರ ಶ್ರೇಷ್ಠ ನಗರವಾಗಿ ಮೆರೆಯುತ್ತಿದ್ದ ಬಾಂಬೆ ಪುರದಿ' ಎಂದು ಬಹು ಹಿಂದೆಯೇ ಕವಿ ಡೇಂಗಾ ದೇವರಾಯ ನಾಯ್ಕ ಮುಂಬೈಯನ್ನು ಕೊಂಡಾಡಿದ್ದಾನೆ. ಮುಂಬೈ ಮಾಯಾನಗರಿ ಅಷ್ಟೇ ಅಲ್ಲ, ಬಹುಪಾಲು ಜನರಿಗೆ ಇದು ಭಾಗ್ಯ ನಗರಿಯೂ ಆಗಿದೆ. ಮುಂಬೈ ಕನ್ನಡಿಗರ ಎರಡನೆಯ ತವರೂರು. ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಬಿಟ್ಟರೆ ಅತಿ ಹೆಚ್ಚು ಕನ್ನಡಿಗರಿರುವ ತಾಣ ಮುಂಬೈ. ಈ ಮಹಾನಗರದಲ್ಲಿ ಹದಿನೆಂಟು–ಇಪ್ಪತ್ತು ಲಕ್ಷ ಕನ್ನಡಿಗರು ನೆಲೆಸಿದ್ದು ಇಂದಿಗೂ ಕನ್ನಡದ ಅಸ್ಮಿತೆಯನ್ನು ಕಾಪಿಟ್ಟುಕೊಂಡು ಬಂದಿರುವುದು ಉಲ್ಲೇಖನೀಯ ಅಂಶ. ಮುಂಬೈ ಕನ್ನಡಿಗರು ಸಂಘಟನೆಯಲ್ಲಿ ಎತ್ತಿದ ಕೈ. ಮುಂಬೈ ಮಹಾನಗರದಲ್ಲಿ ನೂರಕ್ಕೂ ಹೆಚ್ಚು ಕನ್ನಡ ಸಂಘ ಸಂಸ್ಥೆಗಳು ಸಕ್ರಿಯವಾಗಿ ಕನ್ನಡದ ತೇರನೆಳೆಯುವ ಕಾಯಕದಲ್ಲಿ ನಿರತವಾಗಿರುವುದು ಉಲ್ಲೇಖನೀಯ ಸಂಗತಿ. ಬಹುಕಾಲ ಮುಂಬೈಯಲ್ಲಿ ನೆಲೆಸಿ ಕನ್ನಡದ ಪರಿಚಾರಿಕೆಗೈದ ಮಹನೀಯರಲ್ಲಿ ಎಂ.ಎ.ಎನ್.ಪ್ರಸಾದ್ ಅವರು ಒಬ್ಬರು.


ಎಂ.ಎ.ಎನ್.ಪ್ರಸಾದ್ ಅವರು ಬಹಳ ವರ್ಷಗಳ ಕಾಲ ಮುಂಬೈ ಕನ್ನಡಿಗರ ಹೆಮ್ಮೆಯ ಸಂಸ್ಥೆಯಾದ ಮೈಸೂರು ಅಸೋಸಿಯೇಷನ್ನಿನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ಜನಪ್ರಿಯರಾದವರು. ಅವರು ಮೂಲತಃ ವಿಜ್ಞಾನದ ವಿದ್ಯಾರ್ಥಿ. ಫಾರ್ಮಸಿ ಮತ್ತು ಮಾರ್ಕೆಟಿಂಗ್ ಕ್ಷೇತ್ರದಲ್ಲಿ ಹಿರಿಯ ಅಧಿಕಾರಿಯಾಗಿ ಸೇವೆಗೈದ ಅವರು ಮುಂಬೈಯಲ್ಲಿ ಕನ್ನಡದ ಏಳಿಗೆಗೆ ಬಹುವಾಗಿ ಶ್ರಮಿಸಿದವರಲ್ಲಿ ಒಬ್ಬರು. ಪ್ರಸಾದ್ ಅವರು ಸರ್ವಕುತೂಹಲಿ. ಅವರದು ಬಹುಭಾಷಿಕ ಸಂವೇದನೆ. ಕನ್ನಡ, ಹಿಂದಿ, ಸಂಸ್ಕೃತ, ಇಂಗ್ಲೀಷ್, ತಮಿಳು ಭಾಷೆಗಳಲ್ಲಿ ಒಳ್ಳೆಯ ಪ್ರಭುತ್ವ ಸಾಧಿಸಿರುವ ಅವರು ಒಳ್ಳೆಯ ಅನುವಾದಕರೂ ಲೇಖಕರೂ ಆಗಿದ್ದಾರೆ. ಸಂಗೀತ, ನಾಟಕ, ಸಾಹಿತ್ಯ, ಕಲೆ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಆಸ್ಥೆಯನ್ನು ಹೊಂದಿರುವ ಅವರು ಅನೇಕ ಸಂಘ ಸಂಸ್ಥೆಗಳ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಮೈಸೂರು ಅಸೋಸಿಯೇಷನ್ನಿನ ಮುಖವಾಣಿ ನೇಸರು ಪತ್ರಿಕೆಯ ಸಂಪಾದಕರಾಗಿ ದುಡಿದ ಅವರು ಅದಕ್ಕೆ ಹೊಸತನವನ್ನು ತಂದುಕೊಟ್ಟು ಜನಪ್ರಿಯರಾಗಿದ್ದಾರೆ. ಸಧ್ಯ ಬೆಂಗಳೂರಿನಲ್ಲಿ ನೆಲೆಸಿರುವ ಅವರು ಕಲಾಪ್ರೇಮಿ ಫೌಂಡೇಷನ್ ಎಂಬ ಸಂಸ್ಥೆಯ ಮೂಲಕ ಕಲೆ, ಸಾಹಿತ್ಯ, ಸಂಸ್ಕೃತಿಯ ಪ್ರಸಾರ–ಪ್ರಚಾರದಲ್ಲಿ ನಿರತರಾಗಿದ್ದಾರೆ.

**ಸೂಚನೆ :**

**ಎಂ.ಎ.ಎನ್.ಪ್ರಸಾದ್ ಅವರ ಸುಮ ಸಂಚಯ ಕೃತಿ ಮೈಸೂರು ಅಸೋಸಿಯೇಷನ್ನಿನಲ್ಲಿ ಮಾರಾಟಕ್ಕೆ ಲಭ್ಯವಿದ್ದು ಆಸಕ್ತರು 100/– ರೂ ಕೊಟ್ಟು ಅಸೋಸಿಯೇಷನ್‌ನಲ್ಲಿ ಕೃತಿಯನ್ನು ಪಡೆದು ಕೊಳ್ಳಬಹುದಾಗಿದೆ.**

**ಸುಮ ಸಂಚಯ**
**ಲೇ: ಎಂ.ಎ.ಎನ್.ಪ್ರಸಾದ್**
**ಅಭಿಜಿತ್ ಪ್ರಕಾಶನ, ಮುಂಬೈ – 2014**
**ಬೆಲೆ ರೂ. 150/–**

ತಮಿಳು ಸಾಹಿತ್ಯದ ಮಹತ್ವದ ಕೃತಿಗಳನ್ನು ಅವರು ಆಂಗ್ಲ ಭಾಷೆಗೆ ಅನುವಾದಿಸಿ ಸೈ ಎನಿಸಿಕೊಂಡಿದ್ದಾರೆ. ತಿರುಪ್ಪಲ್ಲಾಂಡು, ತಿರುಪ್ಪಾವೈ, ಗದ್ಯತ್ರಯಂ ಅವರ ಪ್ರಸಿದ್ಧ ಅನುವಾದಿತ ಕೃತಿಗಳು. ಕಲೆ, ಸಾಹಿತ್ಯ, ಸಂಸ್ಕೃತಿಯ ಕುರಿತು ಅವರು ನೂರಾರು ಸಾಂದರ್ಭಿಕ ಲೇಖನಗಳನ್ನು ಬರೆದಿದ್ದಾರೆ. ಅನೇಕ ಸಾಧಕರ ಸಂದರ್ಶನ ಮಾಡಿದ್ದಾರೆ. ದೇಶವಿದೇಶಗಳನ್ನು ಸುತ್ತಿ ಬಂದಿರುವ ಅವರು ತಮ್ಮ ಅನುಭವವನ್ನು ಲೇಖನ ರೂಪದಲ್ಲಿ ಹಿಡಿದಿಟ್ಟಿದ್ದಾರೆ. ತಾವೇ ಕೆಲವು ಕವಿತೆಗಳನ್ನು ಬರೆದರೆ ಮತ್ತೆ ತಾವು ಓದಿದ ತಮ್ಮ ಮನಸ್ಸಿಗೆ ಹಿಡಿಸಿದ ಕವನಗಳನ್ನು ಅನುವಾದಿಸಿದ್ದಾರೆ. ವಿಜ್ಞಾನದ




ವಿದ್ಯಾರ್ಥಿಯಾದ ಪ್ರಸಾದ್ ಆರೋಗ್ಯ ಮತ್ತು ವಿಜ್ಞಾನ ಕ್ಷೇತ್ರದ ಕುರಿತು ಸಾಕಷ್ಟು ಸರಿಪ್ಲುತ ಲೇಖನಗಳನ್ನು ಬರೆದು ಓದುಗರ ಗಮನ ಸೆಳೆದಿದ್ದಾರೆ. ಕಳೆದ ನಾಲ್ಕು ದಶಕಗಳಲ್ಲಿ ಪ್ರಸಾದ್ ಅವರು ಬರೆದ ಲೇಖನಗಳಲ್ಲಿ ಕೆಲವನ್ನು ಆಯ್ದು 'ಸುಮ ಸಂಚಯ'ದಲ್ಲಿ ಪೋಣಿಸಿ ಇದೀಗ ಓದುಗರ ಕೈಗಿತ್ತಿದ್ದಾರೆ.

'ಸುಮ ಸಂಚಯ' ಎಂ.ಎ.ಎನ್.ಪ್ರಸಾದ್ ವಿರಚಿತ ವಿಶಿಷ್ಟ ಕೃತಿ. ತಮ್ಮ ವಿಚಾರ, ಅನುಭವ, ಆಲೋಚನೆಗಳನ್ನು ಅವರು ಇಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ದಾಖಲಿಸಿದ್ದಾರೆ. ಇಲ್ಲಿ ಪ್ರಬಂಧಗಳಿವೆ, ಕವಿತೆಗಳಿವೆ, ವ್ಯಕ್ತಿ ಚಿತ್ರಗಳಿವೆ, ಪ್ರವಾಸ ಕಥನವಿದೆ, ರಂಗಭೂಮಿಯ ಕುರಿತ ವಿವೇಚನೆಯಿದೆ, ಆರೋಗ್ಯ ವಿಜ್ಞಾನ ಕ್ಷೇತ್ರ ಕುರಿತ ಅಧ್ಯಯನ ಪೂರ್ಣ ಬರಹಗಳಿವೆ. ಸಮಕಾಲೀನ ವಿದ್ಯಮಾನಗಳ ಹಿನ್ನೆಲೆಯಲ್ಲಿ ಆರೋಗ್ಯದ ಮಹತ್ವವನ್ನು ಇಲ್ಲಿನ ಲೇಖನಗಳಲ್ಲಿ ಒತ್ತಿ ಹೇಳಲು ಪ್ರಯತ್ನಿಸಿದ್ದಾರೆ. ಕಲೆ, ಸಾಹಿತ್ಯ, ಸಂಗೀತ ಎಲ್ಲವೂ ಬೇಕು. ಅವು ಬದುಕನ್ನು ಸಾರ್ಥಕಗೊಳಿಸುತ್ತವೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಇಲ್ಲಿನ ಲೇಖನಗಳು ನಮ್ಮೊಂದಿಗೆ ಸಂವಾದ ನಡೆಸುತ್ತವೆ.

ಅಮೇರಿಕಾ ಇವತ್ತು ಜನಾಕರ್ಷಣೆಯ ಕೇಂದ್ರವಾಗಿದೆ. ಜಗತ್ತಿನ ಶ್ರೀಮಂತ ರಾಷ್ಟ್ರವಾದ ಅಮೇರಿಕಾದ ಮೂಲ ನಿವಾಸಿಗಳ ಬಗ್ಗೆ ಅಷ್ಟಾಗಿ ನಾವು ಗಮನಿಸುವುದಿಲ್ಲ. ಈ ಕುರಿತು ಪ್ರಸಾದ್ ಅವರು ಬರೆದ ಲೇಖನ ಸೊಗಸಾಗಿದೆ. ಅಮೇರಿಕಾದ ಮೂಲನಿವಾಸಿಗಳಾದ ಮಯರು, ಅವರ ಜೀವನ, ಇತಿಹಾಸದ ಮೇಲೆ ಇಲ್ಲಿ ಬೆಳಕು ಹಾಯಿಸಲಾಗಿದೆ. ಈ ಲೇಖನದ ಮುಂದುವರಿದ ರೂಪ 'ನಮ್ಮ ಅಮೇರಿಕಾ ಪ್ರಯಾಣ' ಅಮೇರಿಕಾದ ವರ್ತಮಾನದ ವೈಭವ, ವಿಲಾಸ, ಎಲ್ಲ ಚೆನ್ನಾಗಿ ಬಿಂಬಿತವಾಗಿದೆ. ನಮ್ಮ ನಾಡಿನ ಸಾಂಸ್ಕೃತಿಕ ಕೇಂದ್ರಗಳಾದ ಮೇಲುಕೋಟೆ, ಮುದ್ದೇನಹಳ್ಳಿ, ನಮ್ಮ ನಾಡಿನ ರಂಗಭೂಮಿಯ ವೈಭವವನ್ನು ಹೆಚ್ಚಿಸಿದ ಬಿ.ವಿ.ಕಾರಂತ, ಗಿರೀಶ್ ಕಾರ್ನಾಡ, ಅಷ್ಟಾವಧಾನಿ ಡಾ.ಆರ್.ಗಣೇಶ್ – ಮೊದಲಾದವರ ಜೀವನ ಸಾಧನೆ, ಅವರವರ ಮಾತುಗಳಲ್ಲೇ ಸೊಗಸಾಗಿ ದಾಖಲಾಗಿದೆ. ನಮ್ಮ ಜೀವನ ಶೈಲಿ ಹೇಗಿರಬೇಕು, ಬದುಕು ಸಾರ್ಥಕವಾಗುವ ಬಗೆ *(ಪುಟ 11ಕ್ಕೆ)*

# ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು

# ವಿದುಷಿ ಬೆಂಗಳೂರು ನಾಗರತ್ನಮ್ಮ

(ಗಾಯಕಿ ಹಾಗೂ ತಿರುವಯ್ಯಾರಿನಲ್ಲಿ ತ್ಯಾಗರಾಜ ಉತ್ಸವದ ಮೊದಲ ಸಂಚಾಲಕಿ)



ಬೆಂಗಳೂರು ನಾಗರತ್ನಮ್ಮ ಜನಿಸಿದ್ದು ನಂಜನಗೂಡಿನಲ್ಲಿ. ದೇವದಾಸಿಯರ ಜನಾಂಗಕ್ಕೆ ಸೇರಿದ ಈಕೆಯ ತಾಯಿ ಪುಟ್ಟಲಕ್ಷ್ಮಮ್ಮ ನಂಜನಗೂಡಿನ ವಕೀಲರಾಗಿದ್ದ ಸುಬ್ಬರಾಯರ ಆಶ್ರಯದಲ್ಲಿದ್ದರು. ದಿನಾಂಕ 3–11–1878 ರಂದು ನಾಗರತ್ನಮ್ಮ ಇವರೀರ್ವರ ಮಗಳಾಗಿ ಜನಿಸಿದರು. ನಂಜನಗೂಡಿನಿಂದ ಬೆಂಗಳೂರಿಗೆ ಬಂದು ನಂತರ ಮದರಾಸಿನಲ್ಲಿ ವಾಸವಾದ ಕಾರಣ ಈಕೆಯನ್ನು ಬೆಂಗಳೂರು ನಾಗರತ್ನಮ್ಮ ಎಂದು ಕರೆಯುತ್ತಿದ್ದರು.

ಪ್ರಥಮ ಗುರು ಮೈಸೂರಿನ ಗಿರಿಭಟ್ಟರ ತಮ್ಮಯ್ಯನವರಲ್ಲಿ ಸಂಗೀತ ಮತ್ತು ಸಾಹಿತ್ಯ, ಸಂಸ್ಕೃತ ಭಾಷೆಗಳಲ್ಲಿ ಪಾಠ ಪ್ರವಚನ ಸಾಗಿತು. ಕುಶಾಗ್ರಮತಿಯಾದ ನಾಗರತ್ನ ಬಹು ಬೇಗನೆ ಇವುಗಳನ್ನೆಲ್ಲ ಕರಗತ ಮಾಡಿಕೊಂಡು ಉತ್ತಮ ಗಾಯಕಿಯಾದಳು. ಆದರೆ ಗುರುಗಳಾದ ತಮ್ಮಯ್ಯನವರಲ್ಲಿ ಯಾವುದೋ ಮನಸ್ತಾಪವಾಗಿ ಶಿಕ್ಷಣ ಮೊಟಕಾಯಿತು. ಬೆಂಗಳೂರಿನಲ್ಲಿ ವಿದ್ವಾಂಸರಾದ ಮುನಿಸ್ವಾಮಪ್ಪನವರಲ್ಲಿ ವಿದ್ಯಾಭ್ಯಾಸ ಮುಂದುವರೆಯಿತು. ತ್ಯಾಗರಾಜರ ಶಿಷ್ಯರಾಗಿದ್ದ ವಾಲಾಜಪೇಟೆ ವೆಂಕಟರಮಣ ಭಾಗವತರ ಮಗ ವಾಲಾಜಪೇಟೆ ಕೃಷ್ಣಸ್ವಾಮಿ ಭಾಗವತರು ಮುನಿಸ್ವಾಮಪ್ಪನವರ ಗುರುಗಳು. ಹೀಗಾಗಿ ನಾಗರತ್ನಮ್ಮ ತ್ಯಾಗರಾಜರ ಪ್ರಶಿಷ್ಯಾ ಪರಂಪರೆಗೆ ಸೇರಿದವರಾದರು. ಸಂಗೀತವೇ ಅಲ್ಲದೆ ಅಭಿನಯ ಹಾಗೂ ಆಂಗ್ಲ, ತೆಲುಗು, ತಮಿಳು ಭಾಷೆಗಳ ಪರಿಚಯವಾಯಿತು. ಕಿಟ್ಟಣ್ಣನವರಲ್ಲಿ ನಾಟ್ಯದ ಅಭ್ಯಾಸವೂ ಆಯಿತು.

ಮುಂದಿನ ಜೀವನದ ಏರುಪೇರುಗಳೊಂದಿಗೆ ಗುರುಗಳಾಗಿದ್ದ, ತಂದೆಯಂತಿದ್ದ ಮುನಿಸ್ವಾಮಪ್ಪನವರು ಕಾಲವಾದರು. ಮುಂದೆ ಸಂಗೀತ ಕ್ಷೇತ್ರದ ದಿಗ್ಗಜ ಬಿಡಾರಂ ಕೃಷ್ಣಪ್ಪನವರಲ್ಲಿ ಮಾರ್ಗದರ್ಶನ ಪಡೆದರು. ಮತ್ತೆ ಮದರಾಸಿಗೆ ಪಯಣ, ವಿದ್ವತ್ಪೂರ್ಣವಾದ ಪ್ರತಿಭೆಯಿದ್ದರೂ ತನ್ನದೇ ಆದ ಒಂದು ಸ್ಥಿರವಾದ ನೆಲೆ ಕಾಣದೆ ಪರಿತಪಿಸುವಂತಾಯಿತು. ದಿನನಿತ್ಯ ಸಂಗೀತ ಕಛೇರಿ, ನೃತ್ಯ ಕಲಾ ಶ್ರೀಮಂತಿಕೆಯು ವಿಜೃಂಭಿಸಿ ಸ್ಥಿತಿವಂತರಾದ ನಾಗರತ್ನಮ್ಮನವರು 1935 ರಲ್ಲಿ ಧರ್ಮಕಾರ್ಯಗಳ ಕಡೆಗೆ ತಮ್ಮ ಚಿತ್ತ ಹರಿಸಿದರು. ಬ್ರಾಹ್ಮಣ ಅನ್ನ ಸಂತರ್ಪಣೆ, ಬ್ರಹ್ಮೋತ್ಸವ, ಮೇಲುಕೋಟೆಯ ವೈರಮುಡಿಯ ಉತ್ಸವ ಮಾರ್ಗದಲ್ಲಿ ಒಂದು ಮಂಟಪ ನಿರ್ಮಾಣ, ಹೀಗೆ ಧರ್ಮಕಾರ್ಯದಲ್ಲಿ ಪ್ರಮುಖವಾದುದು ತಿರುವಯ್ಯಾರಿನಲ್ಲಿ ಶ್ರೀ ತ್ಯಾಗರಾಜರ ಸಮಾಧಿ ಸ್ಥಳದ ಪುನರುತ್ಥಾನದೊಂದಿಗೆ ಸೀತಾರಾಮ ದೇವಾಲಯವನ್ನು ನಿರ್ಮಿಸಿದರು.

1921 ರಲ್ಲಿ ಪ್ರಾರಂಭ ಮಾಡಿದ ಕಾರ್ಯ 1925 ರಲ್ಲಿ ಪೂರ್ಣಗೊಂಡಿತು. ಭವ್ಯವಾದ ದೇವಾಲಯ ನಿರ್ಮಾಣಗೊಂಡು ಆರಾಧನೆಗೆ ಸೂಕ್ತ ಸ್ಥಳವಾಯಿತು. ತ್ಯಾಗರಾಜ ಮೂರ್ತಿಯ ಪ್ರತಿಷ್ಠಾಪನೆಯಾಯಿತು. ತಮ್ಮ ಜೀವನದ ಕೊನೆಯ ದಿನಗಳನ್ನು ತ್ಯಾಗರಾಜರ ಸನ್ನಿಧಿಯಲ್ಲಿ ಕಳೆದ ನಾಗರತ್ನಮ್ಮನವರು ವೈಶಾಖಮಾಸದ ಬಹುಳ ಏಕಾದಶಿ (1952 ರ ಮೇ 15 ರಂದು) ಯಂದು ತ್ಯಾಗರಾಜರಿಗೆ ಪೂಜೆ ಸಲ್ಲಿಸಿ, ಒಂದು ಲೋಟ ಹಾಲಿನ ಪ್ರಸಾದ ಸ್ವೀಕರಿಸಿ ರಾಮನಾಮ ಪಠಿಸುತ್ತ ತಮ್ಮ ಜೀವನದ ಅಂತ್ಯ ಹಾಡಿದರು. ತಿರುವಯ್ಯಾರಿನ ತ್ಯಾಗರಾಜ ಉತ್ಸವದ ಮೂಲ ರೂವಾರಿ ಕನ್ನಡಿತಿ ನಾಗರತ್ನಮ್ಮನವರದೆಂಬ ಹೆಗ್ಗಳಿಕೆ ಇವರದಾಯಿತು.

## ಕನ್ನಡ ರಂಗಭೂಮಿಯಲ್ಲಿ ಸಾಮಾಜಿಕ ಕ್ರಾಂತಿ

***(ಪುಟ 2 ರಿಂದ ಮುಂದುವರೆದುದು)***

ನೀಡಿದ್ದು. ಅದರಂತೆ ಕಾರಾಗೃಹ ನಿರೀಕ್ಷಕ, ಶ್ರೀ ವೆಂಕಟಪ್ಪನವರು ಮತ್ತು ಮಹಾನಿರೀಕ್ಷಕ, ಕರ್ನಾಟಕ ಕಾರಾಗೃಹಗಳು ಶ್ರೀ ರೇವಣ ಸಿದ್ದಯ್ಯನವರು ಈ ಕಾರ್ಯದಲ್ಲಿ ಪೂರಕವಾಗಿ ನಿಂತರು.

ಇಂತಹ ಮಹತ್ತರ ಪ್ರಯತ್ನದ ಫಲವಾಗಿರುವ ಮೂರು ನಾಟಕಗಳನ್ನು ಮುಂಬಯಿಯಲ್ಲಿ ತೋರುವ ಒಂದು ಮಹತ್ಕಾರ್ಯಕ್ಕೆ ರಂಗ ಚಳುವಳಿಯ ಮುಂಚೂಣಿಯಲ್ಲಿರುವ ಶ್ರೀ ಶ್ರೀನಿವಾಸ ಕಪ್ಪಣ್ಣನವರು ಹಾಗೂ ಮೈಸೂರು ಅಸೋಸಿಯೇಷನ್, ಮುಂಬೈ ಮುಂದಾಗಿದ್ದಾರೆ.

ಮೇ ೧೬, ಶನಿವಾರ ಮತ್ತು ೧೭ ಭಾನುವಾರ, ೨೦೧೫ ರಂದು ಮೈಸೂರು ಅಸೋಸಿಯೇಷನ್ ಸಭಾಗಾರ, ಮಾಟುಂಗಾದಲ್ಲಿ ಮೂರು ನಾಟಕಗಳನ್ನು ಈ ಕಲಾವಿದರು ಆಡಿ ತೋರಲಿದ್ದಾರೆ.

ಶನಿವಾರ ಮೇ ೧೬, ೨೦೧೫ ರ ಸಂಜೆ ೭.೦೦ ಕ್ಕೆ ಶ್ರೀ ಜಯಂತ ಕಾಯ್ಕಿಣಿಯವರ "ಜೊತೆಗಿರುವನು ಚಂದಿರ" ನಾಟಕವನ್ನು ಶ್ರೀ ಕಟ್ಟೀಮನಿಯವರ ನಿರ್ದೇಶನದಲ್ಲಿ.

ಭಾನುವಾರ ಮೇ ೧೭, ೨೦೧೫ ಮಧ್ಯಾಹ್ನ ೩.೦೦ ಕ್ಕೆ ಶ್ರೀ ಕೆ.ವಿ. ಸುಬ್ಬಣ್ಣನವರ "ಭಗವದುಜ್ಜುಕೀಯಂ" ನಾಟಕವನ್ನು ಶ್ರೀ ಜೀವನ್‌ಕುಮಾರ್ ಹೆಗ್ಗೋಡು ಅವರ ನಿರ್ದೇಶನದಲ್ಲಿ, ಮತ್ತು ಭಾನುವಾರ ಮೇ ೧೭, ೨೦೧೫ ಸಂಜೆ ೭.೦೦ ಕ್ಕೆ ಶ್ರೀ ಶಿವಪ್ರಕಾಶ್ ಅವರ "ಮಾರನಾಯಕ" ನಾಟಕವನ್ನು ಶ್ರೀ ಕಟ್ಟೀಮನಿಯವರ ನಿರ್ದೇಶನದಲ್ಲಿ ಈ ತಂಡ ಆಡಲಿದೆ.

ಮೈಸೂರು ಕಾರಾಗೃಹದ ೨೩ ಬಂದಿಗಳು ಅಂತೆಯೇ ಪೆರೋಲ್‌ನಲ್ಲಿ ಬಿಡುಗಡೆ ಹೊಂದಿರುವ ೧೨ ಮಂದಿ ಕಲಾವಿದರು, ಕರ್ನಾಟಕ ಕಾರಾಗೃಹಗಳ ಮಹಾ ನಿರೀಕ್ಷಕರು ಹಾಗೂ ಅಡಿಷನಲ್ ಪೋಲಿಸ್ ಕಮಿಷನರ್ ಆದ ಶ್ರೀ ಕಮಲ್ ಪಂಥ್, ರಿಟೈರ್ಡ್ ಪೋಲಿಸ್ ಕಮಿಷನರ್ ಆದ ಶ್ರೀ ಗೋಪಾಲ್ ಹೊಸೂರ್, ಮೈಸೂರು ಸೆಂಟ್ರೆಲ್ ಜೈಲ್‌ನ ಸೂಪರಿಂಟೆಂಡೆಂಟ್ ಶ್ರೀಮತಿ ದಿವ್ಯಶ್ರೀ ಈ ಪ್ರದರ್ಶನಕ್ಕೆ ಬರಲಿದ್ದಾರೆ.

ಈ ಪ್ರಯತ್ನಕ್ಕೆ ಪುಟಗೊಟ್ಟು ಮಹಾರಾಷ್ಟ್ರ ಸರ್ಕಾರ ಎಲ್ಲಾ ಬಗೆಯ ಸಹಕಾರವನ್ನು ನೀಡುತ್ತಿದೆ.

ಇಂತಹ ಸಾಮಾಜಿಕ ರಂಗ ಕ್ರಾಂತಿಯನ್ನು ನೋಡುವಂತಹ ಸದಾವಕಾಶ ಮುಂಬಯಿಯ ರಂಗ ಪ್ರೇಮಿಗಳಿಗೆ ಒದಗಿ ಬಂದಿದೆ. ■

**MATRIMONIAL**

Alliance Invited from well educated and well settled working Kannada Brahmin Boy (Mumbai Preferred) for 24 year 5' 4". Girl: MSC, Kaushik Gotra, Smartha Brahmin well settled in Mumbai
Contact: Mr. Prakash Begoor-9223507003
Email : psbegoor@tatapower.com

# ಲೈಂಗಿಕ ಶಿಕ್ಷಣದ ಅಗತ್ಯ– ಸ್ತ್ರೀವಾದಿ ಚಿಂತನೆ

ಶಾಲೆಗಳಲ್ಲಿ ಲೈಂಗಿಕಶಿಕ್ಷಣ ನೀಡಬೇಕೋ ಬೇಡವೋ ಎನ್ನುವುದು ಸಧ್ಯ ಜಗತ್ತಿನಲ್ಲೆಲ್ಲಾ ಬಹುಚರ್ಚಿತ ವಿಷಯಗಳಲ್ಲಿ ಒಂದು. ಮನುಷ್ಯನ ಮೂಲಭೂತ ಅಗತ್ಯಗಳಲ್ಲಿ ಲೈಂಗಿಕಾಸಕ್ತಿಯು ಬಹಳ ಮಹತ್ವದ ಸ್ಥಾನವನ್ನು ಪಡೆಯುತ್ತದೆ ಎನ್ನುವುದು ಸಾರ್ವಕಾಲಿಕ ಸತ್ಯ. ಕ್ಷಣಕ್ಷಣಕ್ಕೂ ವೇಗವಾಗಿ ಬದಲಾಗುತ್ತಿರುವ ಯಾಂತ್ರಿಕ ಜಗತ್ತಿನಲ್ಲಿ, ಜಾಗತೀಕರಣದ ಸಂದರ್ಭದಲ್ಲಿ ಪ್ರಸ್ತುತ ಯುವಜನಾಂಗವು ಬಹಳ ಗೊಂದಲದ ಪರಿಸ್ಥಿತಿಯಲ್ಲಿ ಸಿಲುಕಿದೆ. ಮೊಬೈಲ್, ಅಂತರ್ಜಾಲ, ಇತರ ಮಾಧ್ಯಮಗಳ ಮೂಲಕ ಯಾವ ವಿಷಯವೂ ಸಧ್ಯ ಗೋಪನೀಯವಾಗಿ ಉಳಿದಿಲ್ಲ. ತಮಗೆ ಬೇಕಾದ ವಿಷಯಗಳನ್ನು ತಿಳಿಯಲು ಮಕ್ಕಳಿಗೆ ಇಂದು ಹೆತ್ತವರು ಅಥವಾ ಶಿಕ್ಷಕರು ಬೇಕೆಂದೇನಿಲ್ಲ. ಬೆರಳು ಒತ್ತಿದೊಡನೆ ಅವರಿಗೆ ಎಲ್ಲವನ್ನೂ ತಿಳಿಸುವ, ಅವರ ಕುತೂಹಲವನ್ನು ಕೆರಳಿಸಿ ಬೇರೆಯೇ ಜಗತ್ತಿಗೊಯ್ಯಬಲ್ಲ ತಾಣಗಳು ಇಂದು ಅಂತರ್ಜಾಲದಲ್ಲಿ ಲಭ್ಯವಿದೆ. ಈ ಹಿನ್ನೆಲೆಯಲ್ಲಿ ಲೈಂಗಿಕಶಿಕ್ಷಣವನ್ನು ಶಾಲೆಗಳಲ್ಲಿ ಪರಿಚಯಿಸಬೇಕೆನ್ನುವುದು ಅರ್ಥಹೀನ ವಿಷಯದಂತೆ ಕಾಣಿಸಿದರೆ ಅದರಲ್ಲಿ ತಪ್ಪೇನಿಲ್ಲ. ಆದರೆ ಇಂದು ನಮ್ಮ ಮಕ್ಕಳಿಗೆ ಮುಕ್ತವಾಗಿ ದೊರೆಯುತ್ತಿರುವ ಲೈಂಗಿಕಜ್ಞಾನ ಎಷ್ಟು ಸಮಂಜಸವಾದುದು ಎನ್ನುವುದು ಕೂಡ ಒಂದು ದೊಡ್ಡ ಪ್ರಶ್ನೆ.

ಸ್ವಾತಂತ್ರ ದೊರೆತ ನಂತರ ಭಾರತದಲ್ಲಿ ಏರುತ್ತಿರುವ ಜನಸಂಖ್ಯೆಯನ್ನು ಹತ್ತಿಕ್ಕಲು 50ರ ದಶಕದಲ್ಲಿ ಫ್ಯಾಮಿಲಿ ಪ್ಲಾನ್ನಿಂಗ್ ಅಥವಾ ಕುಟುಂಬ ನಿಯೋಜನೆಯನ್ನು ಪರಿಚಯಿಸಲಾಯಿತು. 1980ರಲ್ಲಿ ಸರಕಾರದ ವತಿಯಿಂದ ಪಠ್ಯಪುಸ್ತಕಗಳು ಕೂಡ 'ಚಿಕ್ಕ ಸಂಸಾರ– ಚೊಕ್ಕ ಸಂಸಾರ', 'ಕೀರ್ತಿಗೊಬ್ಬ ಮಗ–ಆರತಿಗೊಬ್ಬಳು ಮಗಳು' ಎನ್ನುವ ಘೋಷಣೆಯನ್ನು ಮುಕ್ತವಾಗಿ ಸಾರಿದವು. ಬಡತನದ ನಿರ್ಮೂಲನಕ್ಕಾಗಿ ಜನಸಂಖ್ಯೆಯನ್ನು ಹತ್ತಿಕ್ಕಬೇಕೆನ್ನುವ ದಿಕ್ಕಿನಲ್ಲಿ ಜನಜಾಗ್ರತಿಯನ್ನುಂಟು ಮಾಡುವ ಕಾರ್ಯಕ್ರಮಗಳು ವ್ಯಾಪಕವಾಗಿ ನಡೆದವು. ಆದರೆ 1994ರಲ್ಲಿ ಜರುಗಿದ International Conference on Population and Development ನಲ್ಲಿ ಜನಸಂಖ್ಯೆಗಿಂತಲೂ ಏಡ್ಸ್ ಕುರಿತಾಗಿ ಹೆಚ್ಚಿನ ಒತ್ತು ನೀಡಲಾಗಿತ್ತು. ಭಾರತದಲ್ಲಿಯೂ ಈ ಸಮಸ್ಯೆ ವ್ಯಾಪಕವಾಗಿ ಪಸರಿಸುತ್ತಲಿತ್ತು. ಈ ನಿಟ್ಟಿನಲ್ಲಿ ಭಾರತವು 2006ರಲ್ಲಿ UNICEF and National AIDS Control Organisation(NACO) ಇವರ ಸಹಯೋಗದಲ್ಲಿ Adolescent Education Programme (AEP) ಪ್ರಾರಂಭಿಸಿದರೂ ಶೀಘ್ರವೇ ಕೈಬಿಡಲಾಯಿತು. ಈ ಕಾರ್ಯಕ್ರಮದಲ್ಲಿ 14–18ರ ವಯೋಮಾನದವರಲ್ಲಿ ಮಾನಸಿಕ ಹಾಗೂ ಶಾರೀರಿಕ ಸ್ವಾಸ್ಥ್ಯ ಬಗೆಗೆ, ಆರೋಗ್ಯಕರ ಲೈಂಗಿಕ ಸಂಪರ್ಕದ ಕುರಿತು ಅರಿವು ಮೂಡಿಸುವ ಉದ್ದೇಶವಿತ್ತು. ಅದು ಅವಶ್ಯಕವೂ ಆಗಿತ್ತು. ಯಾಕೆಂದರೆ, ಲೈಂಗಿಕಾಸಕ್ತಿಯು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಅಗತ್ಯ. ಪ್ರತಿಯೊಬ್ಬರಿಗೂ ತಮ್ಮ ಲೈಂಗಿಕ ಅವಶ್ಯಕತೆಗಳ ಕುರಿತಾದ ಸಮರ್ಪಕ ಜ್ಞಾನ ದೊರೆತು, ಆರೋಗ್ಯಕರ ಜೀವನ ನಡೆಸುವಂತಾದರೆ, ಆರೋಗ್ಯಕರವಾದ ಸಮಾಜ ನಿರ್ಮಾಣಕ್ಕೆ ದಾರಿಯಾಗುತ್ತದೆ. ಲೈಂಗಿಕ ಶಿಕ್ಷಣದ ಮೂಲ ಉದ್ದೇಶವೆಂದರೆ ಲೈಂಗಿಕತೆಯ ಕುರಿತಾದ ಸಕಾರಾತ್ಮಕ ಭಾವ, ಹೆಣ್ಣು–ಗಂಡು ದೇಹದ ರಚನೆ, ಮುಖ್ಯವಾಗಿ ಸ್ವಂತ ಶರೀರದ ಅಗತ್ಯಗಳ ಕುರಿತಾದ ಪರಿಪೂರ್ಣ ಜ್ಞಾನ, ಆರೋಗ್ಯಕರ ಶರೀರ ಸಂಬಂಧ, ತನ್ನ ಮತ್ತು ತನ್ನ ಸಂಗಾತಿಯ ಕುರಿತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಪ್ರತಿಯೊಬ್ಬರಿಗೂ ಒದಗಿಸುವುದು. ಲೈಂಗಿಕ ಶಿಕ್ಷಣವು ಶರೀರದ ಕುರಿತಾದ ಪರಿಪೂರ್ಣ ಜ್ಞಾನ, ಲಿಂಗ ಭೇದ, ಸಂತಾನೋತ್ಪತ್ತಿ, ಗರ್ಭಧಾರಣೆ, ಸ್ತ್ರೀ–ಪುರುಷ ಸಂಬಂಧ, ಆರೋಗ್ಯಕರ ಲೈಂಗಿಕ ಸಂಪರ್ಕ(ಲೈಂಗಿಕ ರೋಗಗಳನ್ನು ತಡೆಹಿಡಿಯುವ ಮಾಹಿತಿ)ಎಲ್ಲವನ್ನೂ ಒಳಗೊಂಡಿರುತ್ತದೆ. WHO ಪ್ರಕಾರ 12ನೆಯ ವಯಸ್ಸಿನಿಂದ ಲೈಂಗಿಕಶಿಕ್ಷಣವನ್ನು ನೀಡಬಹುದಾಗಿದೆ. ಲೈಂಗಿಕ ಶಿಕ್ಷಣ ನೀಡಿದರೆ ಅತ್ಯಾಚಾರದ ಪ್ರಕರಣಗಳು ಹೆಚ್ಚುತ್ತವೆ; ಇದು ನಮ್ಮ ಸಂಸ್ಕಾರ–ಸಂಪ್ರದಾಯಕ್ಕೆ ತಕ್ಕುದಲ್ಲ ಎನ್ನುವ ನಿಲುವು ನಮ್ಮ ರಾಜಕೀಯ ಮುಖಂಡರದ್ದು. ಸಧ್ಯ ಶಾಲೆಗಳಲ್ಲಿ ಲೈಂಗಿಕ ಶಿಕ್ಷಣವನ್ನು 12ನೇ ತರಗತಿಗೆ ಜೀವಶಾಸ್ತ್ರದ ಭಾಗವಾಗಿ ಮಾತ್ರ ತಿಳಿಸಲಾಗುತ್ತದೆ. ಅದನ್ನು ಕೂಡ ಶಿಕ್ಷಕರು ಗೃಹಪಾಠಕ್ಕೆ ಸೇರಿಸಿ ಲೈಂಗಿಕ ವಿಷಯಗಳನ್ನು ವಿವರಿಸುವ ಮುಜುಗರಕ್ಕೊಳಗಾಗುವ ಸಂದರ್ಭದಿಂದ ನುಣುಚಿಕೊಳ್ಳುತ್ತಾರೆ. ಇದಕ್ಕೆ ಕಾರಣವೂ ಇದೆ.



ಡಾ. ಮಮತಾ ರಾವ್
Mob.no.09920045329
Email: raomamata57@gmail.com

ಭಾರತದ ಸಂದರ್ಭದಲ್ಲಿ ನಾವು ಗಮನಿಸಿದರೆ ಲೈಂಗಿಕತೆಯ ಕುರಿತಾಗಿ ದ್ವಿವಿಧ ಧೋರಣೆ ಸ್ಪಷ್ಟವಾಗಿ ಎದ್ದು ಕಾಣಿಸುವಂತದ್ದು. ನಮ್ಮ ಪುರಾಣಗಳು, ಮಹಾಕಾವ್ಯಗಳು, ಮಾತ್ರವಲ್ಲ ದೇವಸ್ಥಾನಗಳಲ್ಲಿ ಕಂಡುಬರುವ ಶಿಲ್ಪಕಲೆಗಳಲ್ಲಿ ಸ್ತ್ರೀ–ಪುರುಷರ ಶರೀರ ಸಂಬಂಧಗಳ ವಿವರಗಳು ಧಾರಾಳವಾದ ಸಿಗುತ್ತವೆ. ಸ್ತ್ರೀ–ಪುರುಷರ ಆರೋಗ್ಯಪೂರ್ಣ ಶರೀರ ಸಂಬಂಧಗಳ ಕುರಿತಾಗಿ ವಾತ್ಸಾಯನನು ಬರೆದಿರುವ 'ಕಾಮಶಾಸ್ತ್ರ'ಎನ್ನುವ ಗ್ರಂಥ ಜಗತ್ಪ್ರಸಿದ್ಧ. ಆದರೂ ಭಾರತೀಯರು ಇಂದಿಗೂ ಲೈಂಗಿಕತೆಯ ಕುರಿತು ಮುಕ್ತವಾಗಿ ಮಾತನಾಡಲು ಮಡಿವಂತಿಕೆಯನ್ನು ಪ್ರಕಟಿಸುವುದರಲ್ಲಿ ನಿಸ್ಸೀಮರು. ಇಲ್ಲಿ ಹೆಣ್ಣಿಗೊಂದು ನಿಯಮವಾದರೆ, ಗಂಡಿಗೊಂದು ನಿಯಮ. ಒಂದು ಮಗು ಹುಟ್ಟಿದಾಗ ಅದು ಹೆಣ್ಣು ಅಥವಾ ಗಂಡು ಎಂದು ಗುರುತಿಸುವುದು ಲಿಂಗ ಭಿನ್ನತೆಯಿಂದ ಅಷ್ಟೆ. ಹೆಣ್ಣು ಜನಿಸಿ ಬೆಳೆಯುತ್ತಾ ಅವಳನ್ನು ಮಾನಸಿಕವಾಗಿ ಹೆಣ್ಣಾಗಿಸುವ ಪ್ರಕ್ರಿಯೆ ನಡೆಯುವಂತೆ ಗಂಡು ಮಗುವಿನದಾಗುವುದಿಲ್ಲ ಎನ್ನುವುದನ್ನು ಗಮನಿಸುವುದು ಅಗತ್ಯ. ಹುಟ್ಟಿಸಿದ ತಾಯಿಯೇ ಮಗಳನ್ನು ತಾನು ಬೆಳೆದುಬಂದ ಚೌಕಟ್ಟಿನಲ್ಲಿಯೇ ಅಳವಡಿಸಲು ಹರಸಾಹಸ ಪಡುತ್ತಾಳೆ. ಅದೇ ಗಂಡುಮಗುವಾದರೆ ಆತ, ಒತ್ತಡರಹಿತನಾಗಿ ಮುಕ್ತವಾಗಿ ಬದುಕನ್ನು ತನಗೆ ಬೇಕಾದಂತೆ ಅಸ್ವಾದಿಸಲು ಮುನ್ನಡೆಯುತ್ತಾನೆ. ಹೆಣ್ಣು ಋತುಮತಿಯಾಗುವ ಮೊದಲೇ ಅಥವಾ ಋತುಮತಿಯಾದ ಕೂಡಲೆ ಮದುವೆಯಾಗಬೇಕು, ವಿವಾಹಪೂರ್ವ ಹಾಗೂ ವಿವಾಹಬಾಹಿರ ಪರಪುರುಷ ಸಂಬಂಧ ಅವಳಿಗೆ ನಿಷೇಧ. ಗಂಡ ಸತ್ತರೆ ಸನ್ಯಾಸಿನಿಯಂತೆ ವೈರಾಗ್ಯಜೀವನವನ್ನು ಅನುಕರಿಸಬೇಕು; ಗಂಡನಲ್ಲಿ ದೋಷವಿದ್ದರೂ ಬಂಜೆತನದ ಕಳಂಕ ಹೊರುವವಳು ಅವಳೇ..ಇತ್ಯಾದಿ..ಇತ್ಯಾದಿ. ಆದರೆ ಇವು ಯಾವುದೂ ಗಂಡಿಗೆ ಅನ್ವಯಿಸುವುದಿಲ್ಲ. ಮುಖ್ಯವಾಗಿ ಹೆಣ್ಣು ಶತಶತಮಾನಗಳಿಂದ ಪುರುಷನ ಪಾಲಿಗೆ ಭೋಗದ ವಸ್ತುವಾಗಿಯೇ

ಉಳಿದಿದ್ದಾಳೆ. ಹೆಣ್ಣು ಕ್ಷೇತ್ರ, ಗಂಡು ಬೀಜ. ಕ್ಷೇತ್ರದ ಪಾವಿತ್ರ್ಯತೆ ಮುಖ್ಯವೇ ಹೊರತು ಬೀಜದ್ದಲ್ಲ. ಬೀಜ ಇರುವುದೇ ಬಿತ್ತುವುದಕ್ಕಾಗಿ; ಅದಕ್ಕೆ ಕ್ಷೇತ್ರದ ಬಂಧನವಿಲ್ಲ. ಎಷ್ಟು ವಿಚಿತ್ರ ಸಂಗತಿ!!! ಮಾತ್ರವಲ್ಲದೆ ಒಂದೇ ಒಂದು ಬಿಂದುವಿನಷ್ಟು ಕೂಡ ವೀರ್ಯ ನಾಶಮಾಡಬಾರದೆನ್ನುವ ಗಾಢನಂಬಿಕೆಯನ್ನು ಹೊತ್ತವರು ಭಾರತೀಯ ಪುರುಷರು.

ಭಾರತದಲ್ಲಿ ಬಾಲ್ಯವಿವಾಹವನ್ನು ತಡೆಯಲು ಕಾನೂನುಗಳಿದ್ದರೂ ಇಂದಿಗೂ ಋತುಮತಿಯಾದ ಕೂಡಲೆ ಹೆಣ್ಮಕ್ಕಳನ್ನು ಮದುವೆ ಮಾಡಿಸುವ ಪ್ರಕರಣಗಳು ಸಾಕಷ್ಟಿವೆ. ಇದರಿಂದಾಗಿ ಸಣ್ಣಪ್ರಾಯದಲ್ಲಿಯೇ ಲೈಂಗಿಕ ಚಟುವಟಿಕೆಗಳಿಗೆ ಆಸ್ಪದ ದೊರೆಯುವುದು ಹಾಗೂ ಸಣ್ಣ ಪ್ರಾಯದಲ್ಲಿ ಗರ್ಭಧಾರಣೆ ಇತ್ಯಾದಿ ಸರ್ವೇಸಾಮಾನ್ಯ ಸಂಗತಿಗಳು. ಒಟ್ಟಿನಲ್ಲಿ ಸಂಪ್ರದಾಯದ ನೆರಳಿನಲ್ಲಿ ಸಣ್ಣಪ್ರಾಯದಲ್ಲಿಯೇ ವಿವಾಹ-ಲೈಂಗಿಕ ಸಂಭಂಧ ಗರ್ಭಧಾರಣೆ-ಮಾತೃತ್ವ ಎಂದು ಬಲಿಯಾಗುವವರು ಹೆಣ್ಮಕ್ಕಳೇ. ಗರ್ಭವತಿ ಮಹಿಳೆ ಹಾಗೂ ನವಜಾತ ಶಿಶುಗಳ ಮರಣದ ಅಂಕಿಸಂಖ್ಯೆಗಳು ಆಘಾತವನ್ನುಂಟುಮಾಡುತ್ತವೆ. ಹೆಣ್ಣಿಗಿರುವ ಲೈಂಗಿಕ ಚಟುವಟಿಕೆಗಳ ಕುರಿತಾದ ಬಂಧನ ಗಂಡುಮಕ್ಕಳಿಗಿಲ್ಲದ ಕಾರಣ, ಅವರ ಸ್ವೇಚ್ಛಾಚಾರದಿಂದಾಗಿ ಇಂದು ಭಾರತದಲ್ಲಿ 40% ನೂತನ ಏಡ್ಸ್ ರೋಗಿಗಳು 15-29ರ ವಯೋಮಾನದವರು ಎನ್ನುವುದನ್ನು ಗಮನಿಸಿದರೆ ಭಾರತದ ಭವಿಷ್ಯದ ಬಗ್ಗೆ ಹೆದರಿಕೆಯಾಗುತ್ತದೆ.. ಇವರಿಗೆ ತಮ್ಮ ಮೂಲಕ ಹೆಂಡತಿಗೆ, ಅವಳ ಗರ್ಭದಲ್ಲಿರುವ ಶಿಶುವಿಗೂ ಈ ರೋಗಪಸರಿಸುವುದರ ಕುರಿತು ಅರಿವುಂಟು ಮಾಡಬೇಕಾಗಿದೆ. ಹೆತ್ತವರಿಂದ ಹಾಗೂ ಶಿಕ್ಷಕರಿಂದ ಸರಿಯಾದ ಮಾಹಿತಿ ದೊರಕದೆ ಇದ್ದ ಸಂದರ್ಭದಲ್ಲಿ ಗೆಳೆಯರಿಂದ ಅಶ್ಲೀಲ ಪುಸ್ತಕ ಹಾಗೂ ಅಂತರ್ಜಾಲ ತಾಣಗಳಿಂದ ತಪ್ಪು ಮಾಹಿತಿಗಳ ಪ್ರಭಾವ ಯುವಜನಾಂಗವನ್ನು ದಾರಿತಪ್ಪಿಸುವುದು ನಿಶ್ಚಿತ. ಲೈಂಗಿಕ ಸಮಾನತೆ, ಆರೋಗ್ಯಕರ ವೈವಾಹಿಕ ಜೀವನ, ಶಾರೀರಿಕ ಸಂಬಂಧ ಬೆಳೆಸುವಲ್ಲಿ ಜಾಗ್ರತೆ ಇತ್ಯಾದಿಗಳ ಕುರಿತು ಸರಿಯಾದ ಮಾಹಿತಿಗಳ ಅಭಾವದ ಕಾರಣ ಲೈಂಗಿಕ ಅತ್ಯಾಚಾರಗಳು ದೌರ್ಜನ್ಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಲೈಂಗಿಕತೆಯ ಕುರಿತು ವೈಜ್ಞಾನಿಕ ತಿಳುವಳಿಕೆ ಇಲ್ಲದಿದ್ದರೆ-ಅನಿಯಂತ್ರಿತ ಹಾಗೂ ಸ್ವೇಚ್ಛಾಚಾರಯುಕ್ತ ಲೈಂಗಿಕ ಚಟುವಟಿಕೆಗಳಿಂದಾಗಿ ಕಷ್ಟಕ್ಕೀಡಾಗುವವಳು ಕೂಡ ಹೆಣ್ಣೆ ಎನ್ನುವುದನ್ನು ನೆನೆಪಿನಲ್ಲಿಟ್ಟುಕೊಳ್ಳುವುದು ಅಗತ್ಯ.

ಹೆಣ್ಣು ಒಂದು ಶರೀರ ಮಾತ್ರ; ಕೇವಲ ಭೋಗವಸ್ತು ಎನ್ನುವ ಭಾವನೆಯನ್ನು ಕಿತ್ತು ಬಿಸಾಕಿ ಲೈಂಗಿಕತೆಯಾಚೆಗಿನ ಸ್ತ್ರೀಯನ್ನು, ಅವಳ ಒಳಗನ್ನು, ಅವಳ ಬೇಕು-ಬೇಡಗಳನ್ನು ಗುರುತಿಸಬೇಕಾಗಿದೆ. ಸಣ್ಣಮಕ್ಕಳಲ್ಲಿ ಅನಾವಶ್ಯಕವಾಗಿ ಬೆಳೆಸುವ ಲಿಂಗತಾರತಮ್ಯವೇ ಪ್ರೌಢ ವಯಸ್ಸಿನಲ್ಲಿ ಸ್ತ್ರೀ-ಪುರುಷರ ನಡುವಿನ ಅನೇಕ ವೈಷಮ್ಯಗಳಿಗೆ ಕಾರಣವಾಗುತ್ತದೆ ಎನ್ನುವುದನ್ನು ಗುರುತಿಸುವ ಕಾಲ ಬಂದಿದೆ. ಮಹಿಳೆ ಎದುರಿಸುವ ಎಲ್ಲಾ ಸಮಸ್ಯೆಗಳ ಮೂಲ ಲಿಂಗತಾರತಮ್ಯ. ಬಾಲ್ಯದಿಂದಲೇ ಹೆತ್ತವರಾಗಲಿ ಶಿಕ್ಷಕರಾಗಲಿ ಹೆಣ್ಣು-ಗಂಡೆಂಬ ಭೇದಭಾವ ಮಾಡದೆ ಸಮಾನ ಪ್ರೀತಿ, ಅವಕಾಶ ನೀಡಿ ಬೆಳೆಸಿದರೆ ಹೆಣ್ಮಕ್ಕಳಲ್ಲಿಯೂ ಆತ್ಮವಿಶ್ವಾಸ ಮೂಡುತ್ತದೆ; ಗಂಡು ಮಕ್ಕಳು ಕೂಡ ಹಿರಿಯನ್ನು ಅನುಸರಿಸಿ ಹೆಣ್ಮಕ್ಕಳನ್ನು ಗೌರವದಿಂದ ಗುರುತಿಸಲಾರಂಭಿಸುತ್ತಾರೆ. ಲೈಂಗಿಕಶಿಕ್ಷಣದ ಮೊದಲ ಹೆಜ್ಜೆ ಇದು. ಮನೆಯೇ ಮೊದಲ ಪಾಠಶಾಲೆ. ಮಕ್ಕಳು ತಮ್ಮ ಸಂಕಟಗಳನ್ನು, ಸಮಸ್ಯೆಗಳನ್ನು ಯಾವ ಸಂಕೋಚವೂ ಇಲ್ಲದೆ ಮುಕ್ತವಾಗಿ ಚರ್ಚಿಸುವ ಅವಕಾಶ ನಿರ್ಮಾಣವಾದ ಕ್ಷಣ ಲೈಂಗಿಕ ಶಿಕ್ಷಣವನ್ನು ಪ್ರತ್ಯೇಕವಾಗಿ ಪರಿಚಯಿಸುವ ಅವಶ್ಯಕತೆ ಇಲ್ಲವಾಗುವುದರಲ್ಲಿ ಸಂಶಯವಿಲ್ಲ.

ಭಾರತದಲ್ಲಿ -dept of women and child development ಪ್ರಕಾರ 53% ಮಕ್ಕಳು(ಹೆಣ್ಣು-ಗಂಡು ಎಂಬ ಭೇದವಿಲ್ಲದೆ) ಹತ್ತಿರದ ಸಂಬಂಧಿಗಳಿಂದ ಅಥವಾ ಪರಿಚಿತರಿಂದಲೇ ಲೈಂಗಿಕ ಅತ್ಯಾಚಾರಕ್ಕೆ ಒಳಗಾಗಿರುತ್ತಾರೆ. ಅದನ್ನು ಯಾರಲ್ಲಿಯೂ ಹೇಳಿಕೊಳ್ಳಲಾಗದೆ ಮುಚ್ಚಿಟ್ಟು ಮಾನಸಿಕ ಕ್ಷೋಭೆಯಿಂದ ಬಳಲುತ್ತಾರೆ. ಹೆಣ್ಮಕ್ಕಳು ಋತುಮತಿಯಾಗುವ ಸಂದರ್ಭದಲ್ಲಿ ತಮ್ಮ ಶರೀರದಲ್ಲುಂಟಾಗುವ ಪರಿವರ್ತನೆಗಳಿಂದಾಗಿ (ಋತುಸ್ರಾವ, ಅದರೊಂದಿಗೆ ಹೊಟ್ಟೆನೋವು, ಬೆನ್ನುನೋವು, ಸ್ತನಗಳ ಆಕಾರದಲ್ಲಿ ಪರಿವರ್ತನೆ ಇತ್ಯಾದಿ) ಆತಂಕಕ್ಕೊಳಗಾಗಿರುತ್ತಾರೆ. ಈ ಆಂತರಿಕ ಬದಲಾವಣೆಗಳೊಂದಿಗೆ ಸಾಮಾಜಿಕ-ಧಾರ್ಮಿಕ ಕಟ್ಟುಕಟ್ಟಳೆಗಳಿಂದಾಗಿ ಮಾನಸಿಕ ಕ್ಷೋಭೆಯು ಹೆಚ್ಚಾಗುತ್ತದೆ. ಆಕೆಯ ಚಲನವಲನಗಳನ್ನು ಮನೆಯವರಷ್ಟೆ ಅಲ್ಲ ಸಮಾಜವು ಕೂಡ ಹದ್ದಿನ ಕಣ್ಣಿನಿಂದ ಗಮನಿಸುವುದರಿಂದ ಆಕೆ ತನ್ನೊಳಗೆ ಮುದುಡುತ್ತಾ ಮನೋರೋಗಿಯಾಗುವಂತೆ ಮಾಡುತ್ತದೆ. ಲೈಂಗಿಕತೆಯ ಕುರಿತು ವೈಜ್ಞಾನಿಕ ತಿಳುವಳಿಕೆ ಹಾಗೂ ಮಾನಸಿಕ ಸಮಸ್ಯೆಗಳಿಗೆ ಸರಿಯಾದ ಸಲಹೆ ನೀಡುತ್ತಾ ಹೆಣ್ಣು ಬಯಸುವ ಸ್ವಾತಂತ್ರ್ಯವನ್ನು ಹಂತಹಂತವಾಗಿ ನೀಡುತ್ತಾ ಅವಳಲ್ಲಿ ವಿಶ್ವಾಸವನ್ನು ತೋರಿ ಪ್ರೋತ್ಸಾಹಿಸುವ ಮೂಲಕ ಹೆಣ್ಣು ತನ್ನ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲ.

ಜೀವನಶೈಲಿಯ ಬದಲಾವಣೆ, ಉತ್ತಮ ಆಹಾರ ಸೇವನೆ, ಟಿವಿ-ಮೊಬೈಲ್-ಅಂತರ್ಜಾಲಗಳ ಸಂಪರ್ಕದಿಂದಾಗಿ ಪ್ರಸ್ತುತ ಹೆಣ್ಮಕ್ಕಳು ಬಹುಬೇಗನೆ ಋತುಮತಿಯಾಗುವ ಉದಾಹರಣೆಗಳೇ ಹೆಚ್ಚು. ಮೊದಲು 12-14ರ ವಯಸ್ಸಿನಲ್ಲಿ ಋತುಮತಿಯಾಗುತ್ತಿದ್ದರೆ ಈಗ 6ರಿಂದ 10ರ ವಯಸ್ಸಿನ ಹೆಣ್ಮಕ್ಕಳು ಋತುಸ್ರಾವದ ಆಘಾತವನ್ನು ಎದುರಿಸಿ ತತ್ತರಿಸುತ್ತಿವೆ. ಅವರ ಶರೀರ ಬೆಳೆದರೂ ಮನಸ್ಸು ಮಾತ್ರ ಅದನ್ನು ಅರಿಯದ ಮುಗ್ಧತೆಯನ್ನು ಅಭಿವ್ಯಕ್ತಿಸುತ್ತಿವೆ. ಇಂತಹ ಸಂದರ್ಭದಲ್ಲಿ ಅತ್ಯಾಚಾರಗಳ ಪ್ರಕರಣಗಳು ಹೆತ್ತವರನ್ನು ಸಮಾಜವನ್ನು ತತ್ತರಿಸುತ್ತಿವೆ.

ಹೆಣ್ಮಕ್ಕಳಂತೆಯೇ ಯುವಕರಲ್ಲಿಯೂ ಬೆಳೆಯುತ್ತಾ ಉಂಟಾಗುವ ಶಾರೀರಿಕ ಬದಲಾವಣೆಗಳನ್ನು ವಿವರಿಸುತ್ತಾ ಅವರಿಗೆ ಮಾರ್ಗದರ್ಶನ ನೀಡುವ ಅಗತ್ಯವಿದೆ. ಹೆಣ್ಮಕ್ಕಳ ಶರೀರದ ಪರಿಪೂರ್ಣಜ್ಞಾನವನ್ನು ನೀಡಿ ಅವಳನ್ನು ಗೌರವಿಸುವಂತಹ ಅವಳ ಕುರಿತು ಕಾಳಜಿ ವಹಿಸುವಂತಹ ವಾತಾವರಣವನ್ನು ನಿರ್ಮಿಸಬೇಕಾಗಿದೆ. ಋತುಮತಿಯಾಗುವಂತೆಯೇ ಗರ್ಭಧಾರಣೆಯನ್ನು ಕೂಡ ಹೆಣ್ಣೆ ಮಾಡುವ ಕಾರಣ ಈ ಸಂದರ್ಭದಲ್ಲಿ ಆಕೆಯ ಕಾಳಜಿ ತೆಗೆದುಕೊಳ್ಳಬೇಕಾದ ಅಗತ್ಯವನ್ನು ಇಬ್ಬರಿಗೂ ತಿಳಿಸಬೇಕಾಗಿದೆ. ಹೆಣ್ಮಕ್ಕಳಿಗಾಗಿ ಶೌಚಾಲಯದ ವ್ಯವಸ್ಥೆ, ನೈರ್ಮಲ್ಯ, ಸ್ತನಪಾನದ ಮಹತ್ವ, ಎರಡು ಮಕ್ಕಳ ಜನನದ ನಡುವೆ ಅಂತರವನ್ನು ಕಾಪಾಡುವುದು ಇತ್ಯಾದಿ ವಿಷಯಗಳ ಕುರಿತು ವ್ಯಾಪಕ ಅರಿವು ಮೂಡಿಸುವ ಅಗತ್ಯವಿದೆ. ಲೈಂಗಿಕಾಸಕ್ತಿಯು ಜಾಗ್ರತವಾಗುವ ಈ ಸಂದರ್ಭದಲ್ಲಿ ಸರಿಯಾದ ಮಾರ್ಗದರ್ಶನ ದೊರೆತರೆ, ಲೈಂಗಿಕ ಸ್ವೇಚ್ಛಾಚಾರದ ಅನಾಹುತಗಳನ್ನು ವಿವರಿಸಿದರೆ, ಭವಿಷ್ಯದಲ್ಲಿ ಉತ್ತಮವಾದ ಆರೋಗ್ಯಕರ ಸಮಾಜವು ನಿರ್ಮಾಣವಾಗುವುದು ಖಂಡಿತ. ಲೈಂಗಿಕಾಸಕ್ತಿಯು ತಪ್ಪು ಅಥವಾ ಅಪರಾಧ ಎನ್ನುವ ಭೀತಿಯನ್ನು ಕಿತ್ತುಹಾಕಿ ಅದೊಂದು ಸಹಜಕ್ರಿಯೆ ಎನ್ನುವ ಪರಿಜ್ಞಾನವನ್ನು ಮೂಡಿಸುವ ಅಗತ್ಯವಿದೆ.

*(ಮುಂದುವರಿಯುವುದು....)*

# ನಾನೇಕೆ ಬರೆಯುತ್ತೇನೆ

"ನಾನೇಕೆ ಬರೆಯುತ್ತೇನೆ" ಎನ್ನುವ ಈ ಲೇಖನವನ್ನು ಏಕೆ ಬರೆಯುತ್ತಿದ್ದೀನಿ ಎಂದರೆ ಅದಕ್ಕೆ ಕಾರಣ–ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಜಿ.ಎನ್.ಉಪಾಧ್ಯರು. ಸುಮ್ಮನೆ ನಮ್ಮ ಪಾಡಿಗೆ ನಮ್ಮಿಷ್ಟದಂತೆ ಬರೆಯುವುದು ತುಂಬಾ ಸುಲಭದ ಕೆಲಸ. ಆದರೆ "ನಾನೇಕೆ ಬರೆಯುತ್ತೇನೆ" ಎಂದು ತಿಳಿಸಿ ಹೇಳುವುದು ನಿಜಕ್ಕೂ ಕಷ್ಟದ ಕೆಲಸವೆಂದೇ ನನಗನಿಸುತ್ತಿದೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ ಉಪಾಧ್ಯರು ಕೇಳದೆ ಹೋಗಿದ್ದರೆ ನಾನಂತೂ ಈ ಲೇಖನ ಬರೆಯುವ ಗೋಜಿಗೆ ಹೋಗುತ್ತಿರಲಿಲ್ಲಾ. ಆದರೆ ಬೆಂಗಳೂರಿನಲ್ಲಿ ಪ್ರಶಾಂತವಾದ ನನ್ನ ಮನೆಯಲ್ಲಿ ಸುಮ್ಮನೆ ನನ್ನ ಪಾಡಿಗೆ ಆರಾಮವಾಗಿ ಇದ್ದ ನನ್ನನ್ನು ಜಿಎನ್ ಉಪಾಧ್ಯರು ಮೊದಲು "ದಯವಿಟ್ಟು ನಿಮ್ಮ ಆತ್ಮವೃತ್ತಾಂತ ಕಾದಂಬರಿಯ ಬಗ್ಗೆ ಒಂದೆರಡು ಮಾತುಗಳನ್ನು ನಮ್ಮ ವಿದ್ಯಾರ್ಥಿಗಳೊಡನೆ ಹಂಚಿಕೊಳ್ಳೀ ಮೇಡಮ್" ಎಂದು ಕೇಳಿಕೊಂಡರು. ಆದರೆ ಅವರ ಮಾತಿಗೆ ಒಪ್ಪಿಗೆ ಕೊಡಲು ನಾನು ಹಿಂಜರಿಯುತ್ತಿದ್ದೆ. ಏಕೆಂದರೆ ಒಂದು ವೇದಿಕೆ ಮೇಲೆ ಸಾರ್ವಜನಿಕವಾಗಿ ಮಾತನಾಡಲು ನಿಜಕ್ಕೂ ನನಗೆ ತುಂಬಾನೇ ಭಯ. ಆದರೆ ಅಷ್ಟು ಸುಲಭಕ್ಕೆ ತಮ್ಮ ಪಟ್ಟು ಬಿಡದ ಉಪಾಧ್ಯರು ಮೇಲಿಂದ ಮೇಲೆ ಫೋನು ಮಾಡಿ ಒತ್ತಾಯದ ಒತ್ತಡ ಹೇರಿದರು, ಅವರ ಜೊತೆ ನನ್ನ ಗಂಡನೂ ಕೈ ಜೋಡಿಸಿ – ನಿಮಗೆ ತಿಳಿದಂತೆ ಮಾತನಾಡಿ ಎಂದು ಅಭಯ ನೀಡಿದರು. ಹೊರನಾಡಿನಲ್ಲಿ ಸದ್ದುಗದ್ದಲವಿಲ್ಲದೆ ಕನ್ನಡವನ್ನು ಕಟ್ಟಿ, ಉಳಿಸಿ ಬೆಳೆಸುತ್ತಿರುವ ಜಿ.ಎನ್.ಉಪಾಧ್ಯರ ಕನ್ನಡ ಭಾಷೆಯ ಬಗೆಗಿನ ಪ್ರೀತಿ ಹಾಗೂ ಅವರ ವಿದ್ಯಾರ್ಥಿಗಳ ಬಗೆಗಿನ ಕಾಳಜಿಯನ್ನು ಕಂಡು ನಿಜವಾಗಿಯೂ ನನಗೆ ಮನದುಂಬಿ ಬಂತು. ಹಾಗಾಗಿ ಈ ಲೇಖನ ಬರೆಯುವ ಪ್ರಯತ್ನ ಮಾಡುತ್ತಿದ್ದೇನೆ. – ಇಷ್ಟು ಪೀಠಿಕೆಯಾದ ಮೇಲೆ ಮುಖ್ಯ ವಿಷಯಕ್ಕೆ ಬರೋಣ.

1. ನಾನೇಕೆ ಬರೆಯುತ್ತೇನೆ ಎಂದರೆ ಮೊದಲ ಕಾರಣ ನನಗೆ ಬರೆಯಲು ತುಂಬಾ ಇಷ್ಟವಾಗುತ್ತಿದೆ ಅದಕ್ಕೆ.

2. ಏಕೆ ಇಷ್ಟವೆಂದರೆ ಬರವಣಿಗೆಯಲ್ಲಿ ತೊಡಗಿದರೆ ನನ್ನದೇ ಲೋಕವನ್ನು ಸೃಷ್ಟಿಸಿಕೊಳ್ಳಬಹುದು.

3. ಮತ್ತೆ ಮುಖ್ಯವಾಗಿ ಬರವಣಿಗೆಯಲ್ಲಿ ತೊಡಗಿದ್ದಾಗ ಮರೆತಿದ್ದ ಮತ್ತು ಎಂದೋ ಕೇಳಿಸಿಕೊಂಡಂತ, ಎಂತಹ ಚೆಂದದ ಕನ್ನಡ ಪದಗಳು. ವಾಕ್ಯಗಳು "ಥಟ್" ಅಂತ ತಂತಾನೆ ನೆನಪಿಗೆ ಬರುತ್ತವೆ ಎಂದರೆ, ಅವನ್ನು ಬರೆಯುವಾಗ ಬಹಳ ಖುಷಿಯಾಗುತ್ತದೆ, ನಾನು ಚಿಕ್ಕಂದಿನಲ್ಲಿ ಮಾತನಾಡುತ್ತಿದ್ದ ಆಡುಭಾಷೆಯ ನೆನಪಿನೊಂದಿಗೆ ಆ ಕಾಲದ ಚಿತ್ರಣವೆಲ್ಲಾ ಕಣ್ಣಮುಂದೆ ಯಥಾವತ್ತಾಗಿ ಬಿಚ್ಚಿಕೊಳ್ಳುತ್ತದೆ – ಬಣ್ಣ ಬಣ್ಣದ ನವಿಲುಗರಿಯಂತೆ. ಆ ಸುಂದರಲೋಕದ ಮರುಸೃಷ್ಟಿಯಲ್ಲಿ ಕ್ಷಣಕಾಲ ಒಂಟಿಯಾಗಿ ಮೈಮರೆಯುವ ಸುಖ ನನ್ನ ಮನಸ್ಸಿಗೆ ಬಹಳ ಮುದಕೊಡುತ್ತದೆ. ಈ ತರಹ ಈ ಅಕ್ಷರಲೋಕದಲ್ಲಿ ಚಿನ್ನಾಟವಾಡುವುದಿದೆಯಲ್ಲಾ ಅದು ನನಗೆ ಬಹಳ ಸಂತೋಷ ಕೊಡುತ್ತದೆ.

4. ಮತ್ತೆ ಬಹುಮುಖ್ಯವಾಗಿ ಯಾರಿಗೂ ಪುರುಸೊತ್ತು ಸಿಗದ ಈ ಆಧುನಿಕ ಬದುಕಿನಲ್ಲಿ ಒಬ್ಬರು ಇನ್ನೊಬ್ಬರ ಮಾತನ್ನು ಕೇಳಿಸಿಕೊಳ್ಳುವ ವ್ಯವಧಾನವಿಲ್ಲದ ಈ ಕಾಲದಲ್ಲಿ ಬಹಳ ಉತ್ತಮ ಕೆಲಸವೆಂದರೆ ಬರೆಯುವುದು ಅಂತ ನನಗನ್ನಿಸುತ್ತದೆ, ಏಕೆಂದರೆ ನನ್ನ ಪಾಡಿಗೆ ನಾನು ಬರೆಯುತ್ತಾ ಹೋಗಬಹುದು ಮನಸ್ಸಿಗೆ ಬಂದದ್ದನ್ನು ಯಾರ ಹಂಗೂ ಇಲ್ಲದೆ, ಯಾವ ಪಾಡೂ ಇಲ್ಲದೆ. ಹಾಗೆ ಬರೆದು ನನ್ನ ಮನಸ್ಸಿನಲ್ಲಿರುವುದನ್ನು ಹಂಚಿಕೊಳ್ಳುತ್ತೇನೆ – ಕೇಳಿದ್ದನ್ನು, ನೋಡಿದ್ದನ್ನು, ಅನುಭವಿಸಿದನ್ನು. ಆರಾಮವಾಗಿ ಓದುವಂತೆ ಬರೆಯಲು ನನಗಿಷ್ಟ. ಇಷ್ಟವಿದ್ದವರು ಓದುತ್ತಾರೆ, ಸಂತೋಷವನ್ನು ಹಂಚಿಕೊಳ್ಳುತ್ತಾರೆ. ತಮಗಾದ ಅನುಭವವನ್ನು ಹೇಳಿಕೊಳ್ಳುತ್ತಾರೆ. ಅದು ನನ್ನ ಮನಸ್ಸಿಗೆ ಬಹಳ ನೆಮ್ಮದಿಗೆ ಕೊಡುತ್ತದೆ.

5. ಎಲ್ಲಕ್ಕಿಂತ ಹೆಚ್ಚಾಗಿ ಮೊದಲಿನಿಂದಲೂ ನಾನು ಬರೆದ್ದದ್ದನ್ನು ಓದಿ, ಮೆಚ್ಚಿ ಹಾರೈಸಿದ್ದರಲ್ಲಾ ಆ ಒಳ್ಳೆಯ ಮನಸ್ಸಿನವರು ಅವರ ಪ್ರೋತ್ಸಾಹವೇ ನನಗೆ ಬರವಣಿಗೆಯನ್ನು ಮುಂದುವರಿಸಲು ಸ್ಫೂರ್ತಿ ಕೊಟ್ಟಿರುವುದು.

ನಾನು ಬರವಣಿಗೆ ಪ್ರಾರಂಭಿಸಿದ್ದು ಬಹಳ ತಡವಾಗಿ – ಹೆಚ್ಚು ಕಡಿಮೆ 45/46 ವಯಸ್ಸಿನ ಆಸುಪಾಸಿನಲ್ಲಿ. ಅದೂ ಆಕಸ್ಮಿಕವಾಗಿ. ಚಿಕ್ಕಂದಿನಿಂದಲೂ ಓದುವ ಹವ್ಯಾಸವಿತ್ತು, ಅದರದು ಕೇವಲ ಮನರಂಜನೆಗಾಗಿ. ಗಂಭೀರ ಅಧ್ಯಯನದಲ್ಲಿ ತೊಡಗಿರಲ್ಲ. ಪತ್ತೆ ದಾರಿ ಕತೆಗಳೆಂದ್ರೆ ತುಂಬಾ ಇಷ್ಟ. ಚೇಸ್, ಅಗಾಥ ಕ್ರಿಸ್ಟಿ, ಪೆರಿ ಮ್ಯಾಸನ್ ಹೀಗೆ ಓದುತ್ತಿದ್ದೆ, ನಾನು ಹುಟ್ಟಿ ಬೆಳೆದಿದ್ದು ಕೊಡಗಿನಲ್ಲಿ. ನಾನಂತೂ ಮದುವೆಗೆ ಮುನ್ನ ಯಾವ ಸಾಹಿತ್ಯದ ಸಭೆ – ಸಮಾರಂಭಗಳಿಗೂ ಹೋಗಿರಲಿಲ್ಲ. ಆದರೆ ಸಾಹಿತಿ ನರಹಳ್ಳಿ ಬಾಲಸುಬ್ರಹ್ಮಣ್ಯರವರನ್ನು ಮದುವೆಯಾಗಿ ಶ್ರೀಮತಿ ರಜನಿ ನರಹಳ್ಳಿ ಎಂದೆನಿಸಿಕೊಂಡ ಮೇಲೆ ಅನಿವಾರ್ಯವಾಗಿ ಸಾಹಿತ್ಯದ ಅದರಲ್ಲೂ ಕನ್ನಡ ಸಾಹಿತ್ಯದ ಒಡನಾಟ ಒದಗಿ ಬಂತು. ನನ್ನಲ್ಲಿ ಓದಿನ ಅರಿವನ್ನು ತಿಳಿಸಿದ ಮೊದಲ ಗುರು "ನನ್ನ ಗಂಡ". ಇವರು ನನಗೆ ಕಲಿಸಿದ ಮೊದಲ ಪಾಠವೆಂದರೆ ಕನ್ನಡ ಸಾಹಿತ್ಯ ಮತ್ತು ಸಾಹಿತಿಗಳ ಜಗತ್ತಿನ ಬಗ್ಗೆ ಅರಿವನ್ನು ಮೂಡಿಸಿ ಅದನ್ನು

✍ ರಜನಿ ನರಹಳ್ಳಿ

ವಿಸ್ತಾರಗೊಳ್ಳುವಂತೆ ಮಾಡಿದ್ದು. ಓದುವ ಹುಚ್ಚನ್ನು ನನಗೆ ಮಾತ್ರವಲ್ಲಾ ನನ್ನ ಮಕ್ಕಳು ಸಹನಾ, ಸ್ನೇಹಳಲ್ಲೂ ಬೆಳೆಸಿದ್ದಾರೆ. ನನ್ನ ಅಳಿಯನಿಗೂ (ಗುರು ಪ್ರಸಾದ್) ಓದುವ ಅಭಿರುಚಿಯಿದೆ. ಆದರೆ ಎಷ್ಟೇ ಓದುತ್ತಿದ್ದರೂ ಎಂದೂ ಬರೆಯಲು ಹೋಗಿರಲಿಲ್ಲ.

ಆದರೆ 2008 ರಲ್ಲಿ ನನ್ನ ಗಂಡನ ಗೆಳೆಯ ಲಕ್ಷ್ಮಣ ಕೊಡಸೆಯವರು ನನ್ನ ಗಂಡ ನರಹಳ್ಳಿಯವರಿಗೆ ಸಮರ್ಪಿಸಿದ "ಕನ್ನಡ ವಿಮರ್ಶಾ ವಿವೇಕ" ಎಂಬ ಅಭಿನಂದನಾ ಗ್ರಂಥದಲ್ಲಿ ನನ್ನಿಂದ "ಸಖೀ ಕಥನ" ಎಂಬ ಲೇಖನ ಬರೆಸಿದರು. ಅದೇ ನನ್ನ ಮೊತ್ತ ಮೊದಲ ಲೇಖನ. ಅದಕ್ಕೆ ಎಲ್ಲರಿಂದಲೂ ತುಂಬಾ ಒಳ್ಳೆಯ ಪ್ರೋತ್ಸಾಹ ಸಿಕ್ಕಿತು, ಅದೇ ಕಾರಣವಾಗಿ ನನ್ನ ಅಜ್ಜಿಯ ಜಗತ್ತು ಮತ್ತು ಆತ್ಮವೃತ್ತಾಂತ ಎಂಬ ಕಾದಂಬರಿಗಳನ್ನು ಬರೆದೆ, ಅಲ್ಲದೆ ಮಕ್ಕಳು ನಮ್ಮಿಂದ ದೂರವಿರುವುದರಿಂದ (ಯು. ಎಸ್), ಗಂಡನೂ ಸಾಹಿತ್ಯದ ಚಟುವಟಿಕೆಯಲ್ಲಿ ತೊಡಗಿ ಓಡಾಡಿಕೊಂಡಿರುವುದರಿಂದ ಮತ್ತು ಹದಿನಾಲ್ಕೂವರೆ ವರುಷ ಜೊತೆಯಾಗಿದ್ದ ಲಿಯೋ (ಮುದ್ದು ನಾಯಿ) ಈ ಜಗತ್ತನ್ನು ತೊರೆದ ಮೇಲೆ ಮನೆಯಲ್ಲಿ ಒಂಟಿತನವನ್ನು ಎದುರಿಸಲಾಗದೆ ಬರವಣಿಗೆಯ ಮೊರೆ ಹೊಕ್ಕಿದ್ದೇನೆ. ಅದರಲ್ಲಿ ಸುಖ, ನೆಮ್ಮದಿ ಸಂತೋಷವನ್ನು ಕಾಣುತ್ತಿದ್ದೇನೆ.

ಈದೀಗ ನಮ್ಮ ಸಂಸಾರಕ್ಕೆ ಸೇರ್ಪಡೆಯಾದ 2 ವರುಷದ ಮುದ್ದು ಮೊಮ್ಮಗಳು "ಆದ್ಯಾ"ಳಿಗಾಗಿ "ಅಮ್ಮಮ್ಮ ಹೇಳಿದ ಕತೆ" ಎಂಬ ಪುನಃ ಹೇಳಿದ ಮಕ್ಕಳ ಕತೆಗಳನ್ನು ಬರೆದು ಮುಗಿಸಿದ್ದೇನೆ.

ಈಗ ಬರವಣಿಗೆ ನನ್ನ ಬದುಕಿಗೆ ಅನಿವಾರ್ಯವಾಗಿದೆ.

■



21.04.2015 ರಂದು ಅಸೋಸಿಯೇಶನ್ನಿನಲ್ಲಿ 'ಅಕ್ಷಯ ತೃತಿಯ'ದಂದು ಮಹಾಗಣಪತಿಯ ಪ್ರತಿಷ್ಠಾಪನಾ ದಿನದ ನಿಮಿತ್ತ ಪೂಜೆ ವಿಜ್ರಂಭಣೆಯಿಂದ ಜರಗಿತು. ಶ್ರೀಮತಿ ಲತಾ ಮತ್ತು ಶ್ರೀ ರಾಘವೇಂದ್ರ ಉಪಾಧ್ಯಾಯ ಅವರು ಪೂಜೆ ಹೋಮ ಇತ್ಯಾದಿಗಳನ್ನು ನೆರವೇರಿಸಿಕೊಟ್ಟರು.

## ಸುಮಸಂಚಯ ವೈವಿಧ್ಯಮಯ ಕೃತಿ

ಹೇಗೆ ಎಂಬ ಚಿಂತನೆಯೂ ಇಲ್ಲಿನ ಲೇಖನಗಳಲ್ಲಿ ಪಡಿ ಮೂಡಿದೆ. ಪ್ರಸಾದ್ ಅವರ ಈ ಲೇಖನಗಳ ಮಾಲೆಯನ್ನು ಓದುತ್ತಾ ಹೋದಂತೆ




(ಚಿತ್ರ ಕೃಪೆ : ಎಚ್. ಆರ್. ಎಲ್. ವೆಂಕಟೇಶ್)

ನನಗೆ ಡಿವಿಜಿ ಅವರ ಒಂದು ಪದ್ಯ ನೆನಪಾಯಿತು.

"ಒಮ್ಮೆ ಹೂದೋಟದಲಿ
ಒಮ್ಮೆ ಕೆಳೆಕೂಟದಲಿ
ಒಮ್ಮೆ ಸಂಗೀತದಲಿ
ಒಮ್ಮೆ ಶಾಸ್ತ್ರದಲಿ
ಒಮ್ಮೆ ಸಂಸಾರದಲಿ
ಮತ್ತೊಮ್ಮೆ ಮೌನದಲಿ
ಬ್ರಹ್ಮಾನುಭವಿಯಾಗೋ
 ಮಂಕುತಿಮ್ಮ"

ಬದುಕು ಹಸನಾಗುವ ಬಗೆಯನ್ನು ತಿಳಿಹೇಳುವ ಯತ್ನ ಇಲ್ಲಿನ ಲೇಖನಗಳಲ್ಲಿದೆ. ಪ್ರಸಾದ್ ಅವರ ಪ್ರಯತ್ನ ಸಾರ್ಥಕವಾಗಿದೆ. ಈ ಕೃತಿಗಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳು.

## ಲಾಲ್‌ಬಾಗ್‌ನ ಸೊಬಗು



(ಚಿತ್ರ ಕೃಪೆ : ಕೆ. ಎಸ್. ಸುಧೀಂದ್ರ)

ಹಸಿರು ತೋರಿಸಲು ಮನದಲ್ಲಿ ಹಸರಿರಬೇಕು
ಸುತ್ತಲೂ ಹಸಿರಿದ್ದರು ನೋಡ್ವ ಕಣ್ಣಿರಬೇಕು
ಮನವಿರಬೇಕು ಋತು ಬದಲು ಆಗುವಾಗ
ಕಂಡುಕೊಳ್ಳುವ ಒಳ ಕಣ್ಣು ಇರಬೇಕು
ನಮ್ಮೂರಲ್ಲೇ ಇದ್ದರೂ ಒಳಹೊಕ್ಕು
ಇಣಕುವ ಕುತೂಹಲವಿರಬೇಕು
ಮನದಾಳದಲ್ಲಿಳಿಯುವ ಸಾಹಸವಿರಬೇಕು

ತಿರುತಿರುಗಿ ಅಲ್ಲೇ ಸುಳಿಯುತ್ತಿದ್ದರೂ
ಬಾ ಬಾ ಎಂದು ಅಹ್ವಾನವಿದ್ದರೂ
ಗಾಣಕ್ಕೆ ಕಟ್ಟಿದ ಪ್ರಾಣಿಯಂತೆ ತಿರುಗುವಾಗ
ನಿಂತೊಮ್ಮೆ ಕಟ್ಟಿಕೊಂಡ ಕಣ್ಣಪರದೆ
ಬಿಡಿಸಿನೋಡುವಂತಿರಬೇಕು
ಆ ಜೇನಿನಂತೆ ಆ ಹಕ್ಕಿ ಪಕ್ಕಿಯಂತೆ
ಹಾರುವ ಮನಬೇಕು
ಹೂವುಹಸಿರಹಬ್ಬ ಆಚರಿಸುವ ತಪಸ್ಸಿರಬೇಕು

ಹಸಿರು ನೀರಿನ ಕೆರೆ ಅಂಚಿನಲ್ಲಿ ಕುಳಿತು
ಮನ ಮಂಥನ ಮಾಡುವ ಒಳನೋಟವಿರಬೇಕು
ಮನದಾಳದ ಬೇಧಿಸಿ ತಿಳಿ ಕಾಣಬೇಕು
ಅಮೃತನಾಗಿದ್ದರೂ ಸುಧೀಂದ್ರಾನಾಗಬೇಕು
ತಲೆಬಾಗಿಸಿ ಚಿತ್ರಿಸಿ ಬಣ್ಣ ಕಟ್ಟಿ
ಹೂವು ಹಸಿರನರಸುವ ಭೂಸಿರಿಯ
ವೃದ್ಧಿಸುವ ಭೃಂಗದಂತೆ
ಹಸಿರು ಹಾದಿಯ ಪಥಿಕ ಆಗಿರಬೇಕು
ಲಾಲ್ಬಾಗಿಗೆ ಮನ ಬಾಗಬೇಕು
ತಲೆಬಾಗ ಬೇಕು.

— ಅಮೃತ ದೇಸಾಯಿ

(ನಮ್ಮ ಸದಸ್ಯರಾದ ಶ್ರೀ ಕೆ.ಎಸ್. ಸುಧೀಂದ್ರ ಬೆಂಗಳೂರಿನ ಲಾಲ್‌ಬಾಗ್ ಭೇಟಿಯ ನಿಮಿತ್ತ ಕೆಲವು ಛಾಯಾಚಿತ್ರಗಳನ್ನು ಫೇಸ್‌ಬುಕ್‌ನಲ್ಲಿ ಹಾಕಿದ್ದರು. ಅದನ್ನು ನೋಡಿದ ಸ್ಫೂರ್ತಿಯಲ್ಲಿ ನಮ್ಮ ಇನ್ನೊಬ್ಬ ಸದಸ್ಯರಾದ ಶ್ರೀ ಅಮೃತ್ ದೇಸಾಯಿಯವರು ತಮ್ಮ ಪ್ರತಿಕ್ರಿಯೆಯನ್ನು ಮೇಲೆ ಪ್ರಕಟಿಸಿದ ಕವನದ ಮುಖಾಂತರ ವ್ಯಕ್ತಪಡಿಸಿರುತ್ತಾರೆ.)

Date of Publication : 10th of every month RNI No. 040015 / 83
MNE / 93 / 2015-17 Date of Posting : 10/11th of every month at Mumbai
Patrika Channel Sorting Office G.P.O.




Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938